ಕಲ್ಯಾಣ ಕಿರಣ

ಫೆಬ್ರವರಿ 2004

ಬೆಲೆ : ರೂ. 8-00



Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಪೀಠಾರೋಹಣ ಮಾಡಿದ ಬಳಿಕ ಅವರನ್ನು ಅಭಿನಂದಿಸುತ್ತಿರುವ ಪೂಜ್ಯರು, ಶರಣ-ಶರಣೆಯರು.

ದಿ. 13 ರಂದು ಕಾರ್ಯಕ್ರಮ ವೇದಿಕೆಗೆ ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರು, ಮುಖ್ಯ ಅತಿಥಿಗಳಾದ ಶ್ರೀಮತಿ ವಿಜಯ ಸಂಕೇಶ್ವರ, ವಿಜಯ ಸಂಕೇಶ್ವರ ಮತ್ತು ಅಡಿವೆಪ್ಪ ಮಾಸೂರರವರು.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666

ಧರ್ಮಗುರು ಬಸವಣ್ಣ

ಗಣ ಧ್ವಜ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಮೂರನೆಯ

ಕಲ್ಯಾಣ ಪರ್ವ

ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಮೇ 1, 2 ಮತ್ತು 3 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಷಡಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 2 ರಂದು ಬೆಳಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ (ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ / ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎: 08481-651921/652856

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಸಂಪುಟ 34	ಬಸವ ಶಕೆ 870	ಆಜೀವ ಸದಸ್ಯತ್ವ500 ರೂ
ಸಂಚಿಕೆ -12	ಫೆಬ್ರವರಿ 2004	ವಾರ್ಷಿಕ ಚಂದಾ 50 ರೂ

ಲೇಖನಗಳು — ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಮೂರನೆಯ ಕಲ್ಯಾಣ ಪರ್ವಕ್ಕೆ ಆಹ್ವಾನ	-	3
2. ಬನ್ನಿ ಕಲ್ಯಾಣ ಪರ್ವಕೆ	ಮಾತಾಜಿ	5
3. ಮುಂಬರುವ ಹಬ್ಬ-ಹುಣ್ಣಿಮೆ-ಉತ್ಸವಗಳು	-	6
4. ಯುಗದ ಉತ್ಸಾಹ/ಉತ್ಸವ - ಸಂಪಾದಕೀಯ	ಮಾತಾಜಿ	7
5. ವಿವಿಧ ಕಾರ್ಯಕ್ರಮಗಳ ಭಾವಚಿತ್ರಗಳು	-	17
6. ಕಾಡುತ್ತಿರುವ ಲಿಂಗದೇವ	ಮಾತಾಜಿ	43
7. ಬಸವ ತತ್ತ್ವ ತರಬೇತಿ ಕಮ್ಮಟ	ಮಾತಾಜಿ	49
8. ಒಡೆತನದ ಸ್ಥಿರೀಕರಣ	ಮಾತಾಜಿ	52
9. 17ನೇ ಶರಣ ಮೇಳದ ನಿರ್ಣಯಗಳು - ವರದಿ	ಮಾತಾಜಿ	54
10: ಕಲ್ಯಾಣ ಪರ್ವಕ್ಕೆ ಬಿನ್ನಹ	-	57
11. ಸಹಸ್ರ ಪ್ರಾಣ ಬಲಿ ತಡೆ - ಒಂದು ವರದಿ	ಪೂಜ್ಯ ದಯಾನಂದ ಸ್ವಾಮೀಜಿ	63

ಕಲ್ಯಾಣ ಪರ್ವದ ಸ್ವಯಂ ಸೇವಕರಿಗೆ ಉಚಿತ ಅವಕಾಶ

2004 ರ ಮೇ 1,2 ಮತ್ತು 3 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ 3ನೆಯ ಕಲ್ಯಾಣ ಪರ್ವದ ಸಿದ್ಧತೆಯ ಕಾರ್ಯದಲ್ಲಿ ಭಾಗವಹಿಸಲು ಸ್ವಯಂ ಸೇವಕರಿಗೆ 15 ದಿವಸಗಳ ಮೊದಲಿಗೆ, ಸಾಧ್ಯವಾದರೆ ಇನ್ನೂ ಮೊದಲೇ ಬರಲು ಆಹ್ವಾನಿಸುತ್ತಿದ್ದೇವೆ.

ಅದೇ ಸಮಯದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ ಸಹ ಸಂಯೋಜಿತವಾಗಿರುತ್ತದೆ. ಕಮ್ಮಟದ ಖರ್ಚು-ವೆಚ್ಚಗಳನ್ನು ನಿಭಾಯಿಸಲು ಸಹಾಯಕವಾಗಲೆಂದು ಶಿಬಿರ ಶುಲ್ಕವನ್ನು ವಿಧಿಸಲಾಗಿದೆ. ಆದರೆ ಸ್ವಯಂ ಸೇವಕರಿಗೆ ಮಾತ್ರ ಉಚಿತ ಪ್ರವೇಶ ಇರುತ್ತದೆ. ಸ್ವಯಂ ಸೇವಕರು ದಿನವಿಡೀ ಸೇವಾ ಕಾರ್ಯದಲ್ಲಿ ಭಾಗಿಗಳಾಗಬೇಕು. ಅವರಿಗೆ ಸಂಜೆ 7 ರಿಂದ 9ರವರೆಗೆ ನೆನಹು ಮತ್ತು ಪ್ರವಚನದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಶಿಬಿರಾರ್ಥಿಗಳು ಶ್ರಮದಾನವನ್ನು ಸಂಜೆ 5-30 ರಿಂದ 6-30ರವರೆಗೆ ಮಾಡಿದರೆ ಸಾಕು. ಆರ್ಥಿಕವಾಗಿ ಅಶಕ್ತರಾಗಿರುವ ಅನೇಕ ಯುವಕ-ಯುವತಿಯರು, ಸ್ವಯಂ ಸೇವಕರು ಸಹ ಶಿಬಿರ ಶುಲ್ಕ ಕಟ್ಟಬೇಕಾದೀತೆಂಬ ಆತಂಕದಿಂದ ದೂರ ಉಳಿಯಬಾರದೆಂದು ಈ ಸೂಚನೆ ನೀಡಲಾಗಿದೆ. ಅವರ ಸೇವೆಯೇ ಶುಲ್ಕ!

- ಕಲ್ಯಾಣ ಪರ್ವ ಉತ್ಸವ ಸಮಿತಿ

KALYANA KIRANA- Reg. No. 19988/70. 'Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ / ನಿಮ್ಮ ದೂರುಗಳಿಗಾಗಿ ಈ ದೂ. ಸಂಖ್ಯೆಗೆ ಕರೆ ಮಾಡಿ : 080 - 3325335

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಸಂಪುಟ 34	ಬಸವ ಶಕೆ 870	ಆಜೀವ ಸದಸ್ಯತ್ವ500 ರೂ
ಸಂಚಿಕೆ -12	ಫೆಬ್ರವರಿ 2004	ವಾರ್ಷಿಕ ಚಂದಾ 50/- ರೂ

ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿವಿಡಿದು ಬೆಳಗಿತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಬೆಳಕನು ತರುವಾ ಕಲ್ಯಾಣಕೆ ॥4॥

ವಿಶ್ವನಾಯಕದ ದಿನ ನಡೆಯುತಿದೆ ಕಲ್ಯಾಣ ಪರ್ವ
ನಾಡ ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ, ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಥಲವ ತೊಟ್ಟು ಕಟ್ಟುವ ಮತ್ತೆ ನವಕಲ್ಯಾಣ ॥6॥

- ಬಸವಾತ್ಮಜೆ

Digitalized by e-Sahithya Documentation Forum
Sponsored by Sarayu Foundation Trust

ಮುಂಬರುವ ದಿನಗಳಲ್ಲಿ ಒದಗುವ ಹಬ್ಬ-ಹುಣ್ಣಿಮೆ-ಉತ್ಸವಗಳು

1. ದಿ.18-2-2004 ಮಹಾಶಿವರಾತ್ರಿ ಗಣ ಮೇಳ. ಸಾಮೂಹಿಕ ಪ್ರಾರ್ಥನೆ, ಸಂದೇಶವಾಚನ - ಬೆಳಿಗ್ಗೆ 10-30 ಕ್ಕೆ.
3. ದಿ.3-3-2004 ಕಲ್ಯಾಣ ಕ್ರಾಂತಿಯ 808ನೇ ಸಂಸ್ಮರಣ ಕಾರ್ಯಕ್ರಮಗಳ ಆರಂಭ
4. ದಿ.3-3-2004 ಧರ್ಮಪಿತರ ಗಡಿಪಾರು
5. ದಿ.4-3-2004 ಹರಳಯ್ಯ-ಮಧುವರಸರ ಬಂಧನ
6. ದಿ.5-3-2004 ಶರಣರಿಗೆ ಎಳೆಹೂಟೆ ಶಿಕ್ಷೆ (ಮೌನಾಚರಣೆ)
7. ದಿ.6-3-2004 ಬಿಜ್ಜಳನ ವಧೆ
8. ದಿ.7-3-2004 ಕಲ್ಯಾಣದಿಂದ ಚನ್ನಬಸವಣ್ಣನವರ ನಿರ್ಗಮನ
9. ದಿ.8-3-2004 ಕಲ್ಯಾಣ ಕ್ರಾಂತಿ ಸಂಸ್ಮರಣ ದಿನ
10. ದಿ. 13-3-2004 ಪೂಜ್ಯ ಮಾತಾಜಿಯವರ 58ನೇ ವರ್ಧಂತಿ
11. ದಿ. 21-3-2004 ಯುಗಾದಿ-ಶೂನ್ಯ ಪೀಠಾರೋಹಣ - ಅಲ್ಲಮಪ್ರಭು ಜಯಂತಿ

ಶರಣ ವ್ರತ ಸ್ವೀಕಾರ

ಶರಣ ವ್ರತ ಸ್ವೀಕಾರದಿಂದ ಒಂದು ಶಿಸ್ತು ಬರುವುದೆಂಬ ಉದ್ದೇಶದಿಂದ ಅನೇಕ ಶರಣಬಂಧುಗಳ ಕೋರಿಕೆಯ ಮೇರೆಗೆ ಕಲ್ಯಾಣ ಪರ್ವಕ್ಕೆ ಮುನ್ನ ಶರಣ ವ್ರತಾಚರಣೆಗೆ ಅನುಮತಿ ನೀಡಲಾಗುತ್ತಿದೆ.

1. ಗುರು ಸಾರಾಯ ಸಂಪದ್‌ವ್ರತ: 40 ದಿವಸ: ಪ್ರಾರಂಭ 22-3-2004
2. ಲಿಂಗ ಸಾರಾಯ ಸಂಪದ್‌ವ್ರತ: 30 ದಿವಸ: ಪ್ರಾರಂಭ 1-4-2004
3. ಜಂಗಮ ಸಾರಾಯ ಸಂಪದ್‌ವ್ರತ: 20 ದಿವಸ: ಪ್ರಾರಂಭ 11-4-2004
4. ಪ್ರಸಾದ ಸಾರಾಯ ಸಂಪದ್‌ವ್ರತ: 10 ದಿವಸ: ಪ್ರಾರಂಭ 21-4-2004

ದಿ. 1-5-2004 ರಂದು ಬಸವ ಕಲ್ಯಾಣದಲ್ಲಿ ಸಮುದಾಯ ಪ್ರಾರ್ಥನೆ ಮಾಡಿ ಮತ್ತು ಶರಣರಿಗೆ ಶರಣಾರ್ಥಿ ಸಲ್ಲಿಸಿದ ನಂತರ ಶರಣ ವ್ರತವು ಮುಕ್ತಾಯಗೊಳ್ಳುವುದು. ಶರಣ ಬಂಧುಗಳು ಶರಣ ಮೇಳ ಮತ್ತು ಕಲ್ಯಾಣ ಪರ್ವ ಎರಡೂ ಸಮಯದಲ್ಲಿ ವ್ರತ ಸ್ವೀಕರಿಸಬಹುದು ಅಥವಾ ಎರಡರಲ್ಲಿ ಒಂದು ಬಾರಿ ಅನುಕೂಲವಾದಂತೆ ವ್ರತ ಸ್ವೀಕರಿಸಬಹುದು.

ಯುಗದ ಉತ್ಸಾಹ/ಉತ್ಸವ

ಯುಗದ ಉತ್ಸಾಹವ ನೋಡಿರೆ
ಪಂಚಶಕ್ತಿಗಳಿಗೆ ಪಂಚಪ್ರಧಾನರು
ಅವರ ಆಗುಹೋಗನಾ ಶರಣನೆ ಬಲ್ಲ.
ಆ ಶರಣನು ತಾನು ತಾನಾಗಿ ಆರು ದರುಶನಕ್ಕೆ ಯಾಚಕನಲ್ಲ.
ವೇದ ಶಾಸ್ತ್ರ ಆಗಮ ಪುರಾಣ ಛಂದಸ್ಸು
ನಿಘಂಟುಗಳೆಂಬವಕ್ಕೆ ಭೇದಕನಲ್ಲ. ಅದೆಂತೆಂದಡೆ:
ಅವರಂಗದ ಮೇಲೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪ್ರಸಾದವಿಲ್ಲ ಪಾದೋದಕವಿಲ್ಲದ ಭಾಷೆ.
ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವೂ ಪ್ರಣಾಮಂಗೈಯುತ್ತಿದ್ದವು
ಜೀವಿಗಳೆಲ್ಲವೂ ಜಯ-ಜೀಯಾ ಎನುತ್ತಿದ್ದವು.
ಆತ್ಮಂಗಳೆಲ್ಲಾ ಅನುವ ಬೇಡುತ್ತಿದ್ದವು.
ಗುಹೇಶ್ವರಾ, ಸಂಗನಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ ಜೀಯಾ ಎನುತ್ತಿದ್ದವು - ಅ.ಪ್ರ.ವ - 938

ಶೂನ್ಯ ಪೀಠಾಧೀಶರು ವಿಶ್ವಗುರು ಬಸವಣ್ಣನವರ ಜೀವನ ಸಾಧನೆ-ಸಂದೇಶ ಕುರಿತು ಹೇಳುವ ಮಾತಿದು, ಬಣ್ಣನೆಯ ನುಡಿಯಿದು. ಇದು 17ನೆಯ ಶರಣ ಮೇಳದ ಯಶಸ್ವೀ ಕಾರ್ಯಾಚರಣೆ ಮತ್ತು ದಿ. 4-2-2004 ರಂದು ತಪ್ಪಿದ ಪ್ರಾಣಿ ವಧೆಯ ನಂತರ ಬಹು ಸೂಕ್ತವೆನಿಸುವ ವಚನ.

ಕ್ರಾಂತಿಪುರುಷ ಬಸವಣ್ಣನವರ ಬರುವು ಯುಗದ ಉತ್ಸಾಹಕ್ಕೆ ಕಾರಣವಾಯಿತಂತೆ. ಉತ್ಸಾಹಕ್ಕೆ ಇನ್ನೊಂದು ಪಾಠಾಂತರ ಉತ್ಸವ ಎಂದಿದೆ. ಎರಡೂ ಪದಗಳು ಅರ್ಥವನ್ನು ನೀಡುತ್ತವೆ. ಬಸವಣ್ಣನವರಿಂದ ನವ ಧರ್ಮ ಸ್ಥಾಪನೆ, ಅನುಭವ ಮಂಟಪ ರಚನೆ, ಅದರ ಮೂಲಕ ಕಾಯಕ ಬಳಗದ ಒಕ್ಕೂಟ ನಿರ್ಮಾಣ, ನಿತ್ಯ ದಾಸೋಹದ ಪರಿಕಲ್ಪನೆ - ಇಂಥ ಎಲ್ಲ ಘಟನೆಗಳು ಹಿಂದೆ ಸಂಭವಿಸಿರಲಿಲ್ಲ. ಹೀಗಾಗಿ ಬಸವ ಕಲ್ಯಾಣದಲ್ಲಿ ಯುಗದ ಉತ್ಸವವೇ ಜರುಗಿತು ಮತ್ತು ಇದು ಎಲ್ಲರಲ್ಲಿ ಉತ್ಸಾಹವನ್ನು ಉಂಟು ಮಾಡಿತು.

ವರ್ಣಾಶ್ರಮ ಧರ್ಮವು ಮೇಲ್ವರ್ಣದವರನ್ನು ಬಿಟ್ಟರೆ ಉಳಿದ ಶೂದ್ರ, ಅಸ್ಪೃಶ್ಯರಲ್ಲಿ ಮತ್ತು ಸ್ತ್ರೀಯರಲ್ಲಿ ಉತ್ಸಾಹವನ್ನೇ ಬತ್ತಿಸಿತ್ತು. ಅವರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು ಅತ್ಯಂತ ಹೀನಾಯವಾಗಿದ್ದವು. ವರ್ಣಾಶ್ರಮ ಧರ್ಮವು ಹೇರಿದ್ದ ಕಟ್ಟುಪಾಡುಗಳ ಬಂಡೆಯ ಕೆಳಗೆ ಸಿಕ್ಕಿ ಈ ಜನರು ವಿಲಿವಿಲಿ ಒದ್ದಾಡುತ್ತಿದ್ದರು. ಬಾಡುತ್ತಿರುವ ಸಸಿಗೆ ಮಳೆ ಸುರಿದರೆ ಅದು ಪುನರ್ಜನ್ಮ ಪಡೆದು ನಳನಳಿಸುವಂತೆ ಸಮಾಜ ಸುಧಾರಕ

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣನವರ ಅವತಾರ ಮತ್ತು ಸಂದೇಶಗಳಿಂದ ಎಲ್ಲ ವರ್ಣ, ವರ್ಗ, ಜಾತಿಗಳವರಿಗೆ ಬದುಕುವ, ಉದಾತ್ತೀಕರಿಸಿಕೊಂಡು ಉತ್ತಮ ಬಾಳನ್ನು ಬಾಳುವ ಉತ್ಸಾಹವು ಚಿಗುರಿರುವವರಲ್ಲಿ ಎರಡು ಮಾತಿಲ್ಲ. ಈ ವಚನವು ಹೀಗೆ ಮುಂದುವರಿದಿದೆ :

ಪಂಚ ಶಕ್ತಿಗಳಿಗೆ ಪಂಚ ಪ್ರಧಾನರು
ಅವರ ಆಗುಹೋಗನು ಆ ಶರಣನೆ ಬಲ್ಲ

ಈ ಜಗತ್ತಿನ ಸಚರಾಚರದ ಸಮಸ್ತ ಚಟುವಟಿಕೆಗೆ 5 ಶಕ್ತಿಗಳು ಸಾಧನ; ಅವೆಂದರೆ ಪರಾಶಕ್ತಿ, ಆದಿ ಶಕ್ತಿ, ಜ್ಞಾನ ಶಕ್ತಿ, ಇಚ್ಛಾ ಶಕ್ತಿ ಮತ್ತು ಕ್ರಿಯಾ ಶಕ್ತಿ. ಪರಮಾತ್ಮ ಲಿಂಗದೇವನಲ್ಲಿ ಅಂತರ್ಗತವಾಗಿರುವ ಮಹಾನ್ ತತ್ತ್ವವೇ ಚಿತ್ ಶಕ್ತಿ. ಇದರಲ್ಲಿ ಅಂತರ್ಗತವಾಗಿರುವ ಶಕ್ತಿಗಳು 5. ಈ ಶಕ್ತಿಗಳ ಸೂತ್ರಧಾರ ಪರಮಾತ್ಮನೇ. 5 ಕರ್ತವ್ಯಗಳನ್ನು ನಿರ್ವಹಿಸುವ ಅವನಿಗೆ 5 ಮುಖಗಳು ಅವೆಂದರೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ. ಸೃಷ್ಟಿಕರ್ತ ಲಿಂಗದೇವನು 5 ಶಕ್ತಿಗಳ ನೆರವಿನಿಂದ ಸೃಷ್ಟಿ, ಸ್ಥಿತಿ, ಲಯ, ತಿರೋದಾನ, ಅನುಗ್ರಹ ಎಂಬ ಐದು ಕಾರ್ಯಗಳನ್ನು ನಿರ್ವಹಿಸುವರು. ಈ ಮಹತ್ವಪೂರ್ಣ ತತ್ತ್ವವನ್ನು ಜಗತ್ತಿಗೆ ಚಿತ್ರಿಸಿ ದೇವರ ನಿಜ ಸ್ವರೂಪವನ್ನು ತಿಳಿಸಿಕೊಟ್ಟ ಮಹಾನ್ ದಾರ್ಶನಿಕರು ಬಸವಣ್ಣನವರು. ಶಿವನನ್ನೇ ದೇವರೆಂದು ಕೆಲವರು ತಿಳಿದರೆ, ಆದಿ ಶಕ್ತಿ, ಪರಾಶಕ್ತಿ ಮುಂತಾದವಕ್ಕೆಲ್ಲ ಅಕರಾಳ ವಿಕರಾಳವಾದ, ವಿಕಾರ ಉಗ್ರ ರೂಪ ಕೊಟ್ಟವರು ಮತ್ತೆ ಕೆಲವರು. ಇವನ್ನೆಲ್ಲ ಖಂಡಿಸಿ ದೇವರ ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣ ಸ್ವರೂಪವನ್ನು ಬಸವಣ್ಣನವರು ಜಗತ್ತಿಗೆ ತಿಳಿಸಿದರು.

ಆ ಶರಣನು ತಾನು ತಾನಾಗಿ, ಆರು ದರುಷನಕ್ಕೆ ಯಾಚಕನಲ್ಲ
ಮೂರು ದರ್ಶನಕ್ಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರ ಆಗಮ ಪುರಾಣ ಛಂದಸ್ಸು
ನಿಘಂಟುಗಳೆಂಬವಕ್ಕೆ ಭೇದಕನಲ್ಲ

ಸ್ವಯಂ ಕೃತರು, ಸ್ವತಂತ್ರ ವಿಚಾರವಾದಿಗಳೂ ಆದ ಬಸವಣ್ಣನವರು ಆರು-ಆಸ್ತಿಕ ದರ್ಶನಗಳಲ್ಲಿ ಜ್ಞಾನಭಿಕ್ಷೆಯನ್ನು ಬೇಡಲಿಲ್ಲ, ಮೂರು-ನಾಸ್ತಿಕ ದರ್ಶನಗಳನ್ನು ಪ್ರೀತಿಸಲಿಲ್ಲ. ಭಾರತೀಯ ಷಡ್‌ದರ್ಶನಗಳೆಂದರೆ ಸಾಂಖ್ಯ-ಯೋಗ, ನ್ಯಾಯ-ವೈಶೇಷಿಕ, ಪೂರ್ವ ಮೀಮಾಂಸ ಮತ್ತು ಉತ್ತರ ಮೀಮಾಂಸಾ. ದೇವರನ್ನು ನಂಬದ ನಾಸ್ತಿಕ ದರ್ಶನಗಳೆಂದರೆ ಚಾರ್ವಾಕ, ಬೌದ್ಧ ಮತ್ತು ಜೈನ. ಈ ಯಾವುವೂ ಬಸವಣ್ಣನವರ ಮನಸ್ಸಿಗೆ ಸಂತೃಪ್ತಿಯನ್ನು ನೀಡಲಿಲ್ಲ. ಅದೇ ರೀತಿ ಬೌದ್ಧಿಕ ಕಸರತ್ತುಗಳಾದ ವೇದ, ಶಾಸ್ತ್ರ, ಆಗಮ, ಪುರಾಣ, ಛಂದಸ್ಸು, ನಿಘಂಟು ಮುಂತಾದವುಗಳ ಬೆನ್ನು ಹತ್ತಲಿಲ್ಲ.

ಅದೇಕೆಂದಡೆ, ಅವರಂಗದ ಮೇಲೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ
ಪ್ರಸಾದವಿಲ್ಲದ ಭಾಷೆ ಕೇಳಿರೆ.

ಅಷ್ಟಾವರಣಗಳಲ್ಲಿ ವಿಭೂತಿ, ರುದ್ರಾಕ್ಷಿ, ಮಂತ್ರ ರೂಢಿಯಲ್ಲಿದ್ದವು. ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಎಂಬ ಐದು ಆಚರಣಾತ್ಮಕ ತತ್ತ್ವಗಳನ್ನು ನೀಡಿದ ಮಹಾನುಭಾವರು ಬಸವಣ್ಣನವರು. ಹಿಂದಿನ ಮತ ಧರ್ಮಗಳಲ್ಲಿ ಈ ಐದೂ ಇರಲಿಲ್ಲವಾದ ಕಾರಣ ಬಸವಣ್ಣನವರು ಈ ಐದನ್ನು ಅಳವಡಿಸಿದ ಪಥವನ್ನು ಕೊಟ್ಟರು.

ಆ ಗುರುಲಿಂಗ ಜಂಗಮ ಪ್ರಸಾದ
ಪಾದೋದಕ ಏಕಾರ್ಥವಾದ ಕಾರಣ

ಧರ್ಮದ ಆದ್ಯರಾದ ಬಸವಣ್ಣನವರು ಲಿಂಗಾಯತ ಧರ್ಮದ ಮೂಲಕ 5 ಟಿಸಿಲುಗಳನ್ನು ಹೊಂದಿರುವ ಹೆದ್ದಾರಿಯೊಂದನ್ನು ನಿರ್ಮಿಸಿದರು.

ಗುರು: ಪ್ರತಿಯೊಬ್ಬ ಮಾನವ ಜೀವಿಗೂ ಗುರು, ಗುರುಬೋಧೆ, ದೀಕ್ಷಾ ಸಂಸ್ಕಾರ ಕಡ್ಡಾಯವಾಗಿ ದೊರೆಯಬೇಕೆಂದು ಸಂಕಲ್ಪಿಸಿದ ಬಸವಣ್ಣನವರು ಎಲ್ಲರಿಗೂ ದೀಕ್ಷಾ ಸಂಪತ್ತು ಸಿಗುವಂಥ ವ್ಯವಸ್ಥೆ ಮಾಡಿದರು. ಧರ್ಮದಲ್ಲಿ, ದೇವರಲ್ಲಿ ಶ್ರದ್ಧೆ ಕಳೆದುಕೊಳ್ಳುತ್ತ ಲೋಕಮುಖಿಗಳಾಗಿ ಜನರು ಸಾಗುತ್ತಿರುವ ಈ ಕಾಲದಲ್ಲಿ ಇದರ ಮಹತ್ವ ತಿಳಿಯದು. ಆದರೆ ಅಂದಿನ ಶತಮಾನದಲ್ಲಿ ಅದು ಬಹುದೊಡ್ಡ ಕೊಡುಗೆಯಾಗಿ, ಧರ್ಮದ ಹೆಬ್ಬಾಗಿಲನ್ನು ಎಲ್ಲರಿಗೂ ತೆರೆದು ಧಾರ್ಮಿಕ ಸ್ವಾತಂತ್ರ್ಯ ನೀಡಿದ ಘಟನೆಯಾಯಿತು.

ಲಿಂಗ : ನಿರಾಕಾರ ದೇವರಿಗೆ ಯಾವ ಯಾವುದೋ ಆಕಾರ ನೀಡಿ ಅವನ ಸಾರ್ವಭೌಮತ್ವ ಮತ್ತು ನಿರಂಜನತ್ವಕ್ಕೆ ಚ್ಯುತಿ ತರಬಾರದೆಂದು ದೇವನ ಕೃತಿಯಾದ ಬ್ರಹ್ಮಾಂಡದ ಗೋಲಾಕಾರವನ್ನು ನೀಡಿ ಇಷ್ಟಲಿಂಗವಾಗಿ ಗಟ್ಟಿಗೊಳಿಸಿದವರು ಬಸವಣ್ಣನವರು. ದೀಕ್ಷೆಯ ಮೂಲಕ ದೇವರ ಕುರುಹಾದ ಇಷ್ಟಲಿಂಗವನ್ನು ನೀಡಿ ದೇವರು-ಭಕ್ತರ ನಡುವೆ ಮಧ್ಯವರ್ತಿಯಾದ ಪುರೋಹಿತ ಶಾಹಿಯನ್ನು ಬಸವಣ್ಣನವರು ತೊಡೆದರು. ಭಿನ್ನಭೇದದ ಆಗರವಾದ ಗುಡಿ ಸಂಸ್ಕೃತಿಯನ್ನು ತೊಡೆದು ತನ್ನ ಅಂಗದ ಮೇಲೆ ಲಿಂಗವನ್ನು ಧರಿಸಿ, ಇದ್ದಲ್ಲಿಯೇ ದೇವನನ್ನು ಪೂಜಿಸುವ ಸದವಕಾಶವನ್ನು ಕಲ್ಪಿಸಿದರು. ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಇಷ್ಟಲಿಂಗವು ಪರಮ ಸಾಧನವಾಯಿತು.

ಜಂಗಮ: ಸಮಾಜ ಪ್ರೇಮಿ, ಸಮಾಜ ಸುಧಾರಕನಾದ ಜಂಗಮನು ವಿಶ್ವಕುಟುಂಬಿ. ಹೊಲಬುಗೆಟ್ಟವರನ್ನು ಸರಿದಾರಿಗೆ ತರುವ ಸಮಾಜ ಶಿಕ್ಷಕ, ನೊಂದವರನ್ನು ಸಂತೈಸುತ್ತ, ದುರ್ಮಾರ್ಗಿಗಳನ್ನು ತಿದ್ದುವ ಭವರೋಗ ವೈದ್ಯ, ದೀಕ್ಷೆಯ ಮೂಲಕ ಒಳಕ್ಕೆ ಬಂದವರನ್ನು ಸಮಾನ ಭಾವದಿಂದ ಕಂಡು ಎಲ್ಲರನ್ನು ಬೆಸೆದು ಸಾಮಾಜಿಕ ಸೋದರತ್ವ ಅಳವಡಿಸುವ ಪಾವನಾತ್ಮ.

ಕರುಣೋದಕ (ಪಾದೋದಕ) ಮತ್ತು ಕರುಣ ಪ್ರಸಾದ : ದೀಕ್ಷಾ ಪೂರ್ವದ ವರ್ಣ, ಜಾತಿ ಭೇದಗಳನ್ನು ನಿವಾರಿಸಿ ಅಖಂಡ ಶರಣ ಸಮಾಜ ಕಟ್ಟುವಲ್ಲಿ ಗುರು-ಜಂಗಮರು ನೀಡುವ ಕರುಣೋದಕ-ಕರುಣ ಪ್ರಸಾದಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ದೀಕ್ಷಾ ಗುರು ಮತ್ತು ಸಮಾಜ ಶಿಕ್ಷಕರಾದ ಜಂಗಮರು ಭಕ್ತರ ಮನೆಗಳಲ್ಲಿ ಸಂಚರಿಸಿ, ಅವರಿಗೆ

Digitalized by e-Sahithya Documentation Forum
Sponsored by Sarayu Foundation Trust

ಕರುಣೋದಕ-ಪ್ರಸಾದ ನೀಡಿ, ತಾವೂ ಅವರ ಮನೆಯಲ್ಲಿ ಪ್ರಸಾದ ಸ್ವೀಕರಿಸುವುದರಿಂದ ಜನರಲ್ಲಿ ಪರಸ್ಪರ ಶ್ರೇಷ್ಠ-ಕನಿಷ್ಠ ಎಂಬ ಮನೋಭಾವ ಪರಸ್ಪರರಲ್ಲಿ ಅಳಿಯಲು ಸಾಧ್ಯವಾಗುವುದು. ಬಸವಣ್ಣನವರು ಇಂಥದೊಂದು ಶ್ರೇಷ್ಠಪಥವನ್ನು ಕೊಟ್ಟುದಕ್ಕಾಗಿ,

ಪ್ರಾಣಿಗಳೆಲ್ಲವು ಪ್ರಣಾಮಂಗೈಯುತ್ತಿದ್ದವು
ಜೀವಿಗಳೆಲ್ಲವೂ ಜಯ, ಜೀಯಾ ಎನ್ನುತ್ತಿದ್ದವು
ಆತ್ಮಂಗಳೆಲ್ಲವು ಅನುವ ಬೇಡುತ್ತಿದ್ದವು
ಗುಹೇಶ್ವರಾ, ಸಂಗನ ಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ, ಜೀಯಾ ಎನುತ್ತಿದ್ದವು.

ಪ್ರಭುದೇವರ ಮಾತು ಎಷ್ಟು ಅರ್ಥಗರ್ಭಿತವಾಗಿವೆಯಲ್ಲವೆ ? ಪ್ರಾಣಿಗಳೆಲ್ಲವೂ ಪ್ರಣಾಮಂಗೈಯುತ್ತಿದ್ದವು : ಆದಿ ಮಾನವನು ಕಾಡು ಮೇಡುಗಳಲ್ಲಿ ವಾಸಿಸುತ್ತ ಅತ್ಯಂತ ಅನಾಗರಿಕ ಸ್ಥಿತಿಯಲ್ಲಿದ್ದಾಗ ನರರನ್ನು ಛೇದಿಸಿ ನರ ಮಾಂಸವನ್ನು ಸಹ ತಿನ್ನುತ್ತಿದ್ದ. ಅಂದಿನ ಸಮಾಜವು ಬುಡಕಟ್ಟುಗಳ ರೂಪದಲ್ಲಿದ್ದಾಗ ಒಂದು ಬುಡಕಟ್ಟಿನವರು ಇನ್ನೊಂದು ಬುಡಕಟ್ಟಿನವರನ್ನು ಎಳೆದು ತಂದು ತಮ್ಮ ಆರಾಧ್ಯ ದೈವಂಗಳಿಗೆ ಬಲಿಕೊಟ್ಟು, ನರಮಾಂಸವನ್ನು ತಿನ್ನುತ್ತಿದ್ದರು. ನಾಗರಿಕತೆ-ಸಂಸ್ಕೃತಿ ವಿಕಾಸಗೊಂಡಂತೆ ನರ ಛೇದ ಬಿಟ್ಟು, ಪ್ರಾಣಿಗಳ ಛೇದನ ಮಾಡತೊಡಗಿದ, ಪ್ರಾಣಿಗಳು ಇರುವುದೇ ಮಾನವನ ಆಹಾರಕ್ಕಾಗಿ ಎಂದು ವಿವಿಧ ಪ್ರಾಣಿಗಳನ್ನು ವಧಿಸಿ ತಿನ್ನುವ ಅಭ್ಯಾಸ ರೂಢಿಗೊಂಡಿತು.

ಜಗತ್ತಿನ ಇತಿಹಾಸದಲ್ಲಿ ಬುದ್ಧ, ಜಿನ ಸಂತರು ಅಹಿಂಸೆಯ ಉಪದೇಶ ಮಾಡಿ ಕ್ಷುದ್ರದೇವತೆಗಳಾದ ಮಾರಿ, ದುರ್ಗಿಯರಿಗೆ ಪ್ರಾಣಿಗಳನ್ನು ಬಲಿಕೊಡುವುದನ್ನು ಮತ್ತು ಯಜ್ಞ-ಯಾಗಗಳ ಮೂಲಕ ವೈದಿಕರು ಆಡು, ಅಶ್ವ, ಆನೆ ಮುಂತಾದ ಪ್ರಾಣಿಗಳನ್ನು ಆಹುತಿ ಕೊಡುವುದನ್ನು ತಪ್ಪಿಸಿದರು. ಕಾಲಾನಂತರದಲ್ಲಿ ಆ ಅಹಿಂಸಾ ಧರ್ಮಗಳು ಶಿಥಿಲಗೊಂಡು ಪುನಃ ಕ್ರೌರ್ಯವು ವಿಜೃಂಭಿಸತೊಡಗಿತು. 12ನೆಯ ಶತಮಾನದಲ್ಲಿ ಅವತರಿಸಿದ ಬಸವಣ್ಣನವರು ಅಹಿಂಸಾ ಧರ್ಮವನ್ನು ಬೋಧಿಸಿದರು. ಅದರ ಫಲವಾಗಿ ಸುಮಾರು ಮೂರೂವರೆ ಕೋಟಿ ಅನುಯಾಯಿಗಳುಳ್ಳ ಲಿಂಗಾಯತ ಸಮಾಜ ಅಸ್ತಿತ್ವದಲ್ಲಿದೆ. ಶರಣ ಸಂಸ್ಕೃತಿಯ ಪ್ರಭಾವದಲ್ಲಿರುವ ಹಲವಾರು ಜಾತಿ ಮತ ಪಂಥಗಳವರು ಇಂದು ಶುದ್ಧ ಸಸ್ಯಾಹಾರಿಗಳಾಗಿದ್ದಾರೆ. ಮೂರೂವರೆ ಕೋಟಿ ಲಿಂಗಾಯತರಲ್ಲಿ 50 ಲಕ್ಷ ಜನರು ದಾರಿಬಿಟ್ಟರು, ಅನೀತಿವಂತರಾಗಿ ಮಾಂಸಾಹಾರಿಗಳಾಗಿದ್ದಾರೆ ಎಂದುಕೊಳ್ಳೋಣ. ಆದರೆ, ಉಳಿದ ಮೂರು ಕೋಟಿ ಜನರಾದರೂ ಸಸ್ಯಾಹಾರಿಗಳಾಗಿದ್ದಾರಷ್ಟೆ. ಇವರುಗಳು ಒಂದು ವೇಳೆ ಮಾಂಸಾಹಾರಿಗಳಾಗಿ, ದೀಕ್ಷೆ ಪಡೆಯದೆ ಹಿಂದಿನ ಸಂಸ್ಕಾರದಲ್ಲಿಯೇ ಉಳಿದಿದ್ದರೆ ಆಗ ಅವರ ನಾಲಿಗೆಯ ಚಪಲಕ್ಕೆ ಹೊಟ್ಟೆ ತಣಿಸಲು ಎಷ್ಟೊಂದು ಪ್ರಾಣಿಗಳು ಸಾಯಬೇಕಾಗುತ್ತಿತ್ತಲ್ಲವೆ ? ಅವನ್ನೆಲ್ಲ ಉಳಿಸಿದ ಪುಣ್ಯ ಧರ್ಮಗುರು ಬಸವಣ್ಣನವರಿಗೆ ಸೇರುತ್ತದೆ. ಅದಕ್ಕಾಗಿ ಪ್ರಾಣಿಗಳೆಲ್ಲವು ಬಸವಣ್ಣನವರಿಗೆ ಕೃತಜ್ಞತೆಯಿಂದ ''ನಮ್ಮ ಪ್ರಾಣಿ

ಕುಲದ ಬಹುಭಾಗವನ್ನು ವಧೆಯಿಂದ ತಪ್ಪಿಸಿದೆ ಬಸವಣ್ಣ'' ಎಂದು ಕೊಂಡಾಡಿದರೆ ಆಶ್ಚರ್ಯವೇನಿದೆ ?

''ಸರ್ವೇ ಜನಾ ಸುಖಿನೋ ಭವಂತು'' ಎಂಬ ಸೂತ್ರವು ಸರ್ವ ಜನರ ಸುಖವನ್ನು ಬಯಸಿದರೆ ''ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ'' ಎಂಬ ಸೂತ್ರ ಬೋಧಿಸಿ ಸರ್ವಜೀವಿಗಳ ಕಲ್ಯಾಣವನ್ನು ಬಸವಣ್ಣನವರು ಆಶಿಸಿದರು. ಅದಕ್ಕಾಗಿ ಎಲ್ಲ ಜೀವಿಗಳು ಬಸವಣ್ಣನವರಿಗೆ ಜಯಕಾರ ಹಾಕಿ, ಜೀಯಾ ಅರ್ಥಾತ್ ಒಡೆಯ ಎಂದು ಕೊಂಡಾಡುತ್ತವಂತೆ ''ಆತ್ಮಂಗಳೆಲ್ಲವೂ ಅನುವ ಬೇಡುತ್ತಿದ್ದವು''. ಅನುವು ಎಂದರೆ ಆಸರೆ, ಆಶ್ರಯ. ವರ್ಣ, ವರ್ಗ, ಜಾತಿ ಮತ್ತು ಲಿಂಗಭೇದವಿಲ್ಲದೆ ಎಲ್ಲರಿಗೂ ಬಸವಣ್ಣನವರು ಧರ್ಮದ ಆಶ್ರಯ ಕೊಡಲು ಮುಂದಾದುದರಿಂದ ಎಲ್ಲ ವರ್ಣಗಳ ಜನರೂ ಬಸವ ಧರ್ಮದಲ್ಲಿ ಆಶ್ರಯ ಬೇಡಿದರು.

ಹೀಗೆ ಬಸವಣ್ಣನವರ ವ್ಯಕ್ತಿತ್ವದ ಕೀರ್ತಿ ಎಲ್ಲಾ ದಿಕ್ಕುಗಳಲ್ಲೂ ಹಬ್ಬಿ, ಆಶ್ರಯಕ್ಕಾಗಿ, ಅನುಗ್ರಹಕ್ಕಾಗಿ ಜನರು ಧಾವಿಸಿ ಬಂದುದನ್ನು ಶೂನ್ಯ ಪೀಠಾಧೀಶರಾದ ಅಲ್ಲಮಪ್ರಭುದೇವರು ಬಹಳ ಮಾರ್ಮಿಕವಾಗಿ ಬಣ್ಣಿಸುತ್ತಾರೆ.

ಭಾಗ - 2

ಪ್ರಾಣಿ ವಧೆ ತಪ್ಪಿದ ವಿಶೇಷ ಪ್ರಸಂಗ

ಗದಗ ಜಿಲ್ಲೆಯ ರೋಣ ತಾಲ್ಲೋಕಿನ ಬೊಮ್ಮಸಾಗರದಲ್ಲೊಂದು ದುರ್ಗಿಯ ಗುಡಿ. ಪ್ರತಿ ವರುಷ ಕೋಣ, ಕುರಿ, ಕೋಳಿ ಸೇರಿದಂತೆ ಸಾವಿರಾರು ಪ್ರಾಣಿಗಳ ಬಲಿ. ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಜೈನ ಸಮಾಜದ ಮುಖಂಡರಾದ ಶ್ರೀ ಉತ್ತಮ ಚಂದ ದುಗ್ಗಡ್ ಮತ್ತು ಸಂಘದ ಪ್ರಧಾನ ಸಂಚಾಲಕರಾದ ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು ಶರಣ ಮೇಳಕ್ಕೆ ಆಗಮಿಸಿ ಈ ಬಗ್ಗೆ ಉಪನ್ಯಾಸ ನೀಡಿದರು. ದೇವಾಲಯಗಳಂತಹ ಪವಿತ್ರ ಸ್ಥಳಗಳಲ್ಲಿ ಪ್ರಾಣಿಬಲಿ ಮಾಡಬಾರದೆಂದು ಕಾನೂನು ಹೇಳುತ್ತಿದ್ದರೂ, ಮಾನವೀಯತೆ ಘೋಷಿಸುತ್ತಿದ್ದರೂ ರಾಜಕಾರಣಿಗಳ ಬೆಂಬಲದಿಂದ, ಪೋಲೀಸರ ನಿಷ್ಕ್ರಿಯತೆಯಿಂದ ಪ್ರಾಣಿವಧೆ ನಿರಂತರವಾಗಿ ನಡೆಯುತ್ತಿದೆ. ಶಿಕ್ಷಣ, ಹೊರಗಿನ ವೇಷಭೂಷಣ, ಅಲಂಕರಿಸಿದ ಹುದ್ದೆಗಳಿಂದ ಬಹಳ ಸುಧಾರಿಸಿದವರಂತೆ ಕಾಣುವ ಸಚಿವರುಗಳಾದ ಶ್ರೀ ವಿಶ್ವನಾಥ್, ಶ್ರೀ ಡಿ.ಕೆ. ಶಿವಕುಮಾರರಂಥವರೇ ಹರಸಿಕೊಂಡು ಪ್ರಾಣಿಗಳನ್ನು ಬಲಿಕೊಟ್ಟು ಬರುತ್ತಾರೆಂದರೆ ಇನ್ನು ಶಿಕ್ಷಣದ ಗಂಧ ವೈಚಾರಿಕತೆಯ ಸೋಂಕು ಇಲ್ಲದ ಗ್ರಾಮೀಣ ಜನರ ಪಾಡೇನು ? ಶ್ರೀ ಎಸ್. ಎಂ.ಕೃಷ್ಣ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಧಿಕಾರದ ಅವಧಿಯಲ್ಲಿಯಂತೂ ಪ್ರಾಣಿಬಲಿಯ ಕೆಲಸ ಅವ್ಯಾಹತವಾಗಿ ನಡೆಯಿತು. ವಿದೇಶಕ್ಕೆ ಹೋಗಿ ಶಿಕ್ಷಣ ಪಡೆದು ಬಂದರೇನಂತೆ ವ್ಯಕ್ತಿಯ ಅಂತರಂಗದಲ್ಲಿ ವೈಚಾರಿಕ ಪರಿವರ್ತನೆಯಾಗದೆ ಇದ್ದರೆ ಯಾವ ಸುಧಾರಣೆಯೂ ಆಗದು. ಆರೋಗ್ಯದ ದೃಷ್ಟಿಯಿಂದ ಸಸ್ಯಾಹಾರ ಶ್ರೇಷ್ಠ ಎಂಬ ಆದರ್ಶ

Digitalized by e-Sahithya Documentation Forum
Sponsored by Sarayu Foundation Trust

ಒಂದು ಕಡೆ ಇಟ್ಟು ಮಾತನಾಡಿದರೂ ; ಎಲ್ಲರೂ ಸಸ್ಯಾಹಾರಿಗಳಾಗುವುದು ಸಾಧ್ಯವೆ ? ಮಾಂಸಾಹಾರವೂ ಜೀವನದ ಒಂದು ಅವಿಭಾಜ್ಯ ಅಂಗ ಎಂಬಂತೆ ಮಾತನಾಡುವ ಪತ್ರಿಕೆಗಳಿಗೆ ಪತ್ರ ಬರೆಯುವ ವಿಶ್ವ ಬಸವ ಧರ್ಮ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಡಾ|| ದೇ. ಜವರೇಗೌಡರ ಮಾತನ್ನು ಲೆಕ್ಕಕ್ಕೆ ಇಟ್ಟುಕೊಂಡರೂ. ದೇವಾಲಯಗಳಲ್ಲಿನ ಪ್ರಾಣಿವಧೆಯನ್ನು ಸಮರ್ಥಿಸಿಕೊಳ್ಳಲು ಆಧಾರ ದೊರೆಯದು. ಮಾಂಸಾಹಾರಿಗಳ ಹೊಟ್ಟೆ ತಣಿಸಲು ಪ್ರಾಣಿಗಳು, ಅವರ ದೃಷ್ಟಿಯಲ್ಲಿ ಬೇಕು. ಹೀಗಾಗಿ ಅಂಥವರು ಜೀವಿಗಳು ಸಹ ಬದುಕುವ ಹಕ್ಕನ್ನು ಹೊಂದಿವೆ ಎಂಬುದನ್ನು ಖಂಡಿತಾ ಪುರಸ್ಕರಿಸರು. ಆದರೆ ಕೊಲ್ಲುವಿಕೆಯಲ್ಲಿಯೂ ಕೊಂಚ ದಯೆ ಬೇಕಲ್ಲವೆ? ಅತ್ಯಂತ ಉಗ್ರವಾದ ರೀತಿಯಲ್ಲಿ ಪ್ರಾಣಿಯ ಚಂಡನ್ನು ಕಡಿಯುವಾಗ ಹಿಂದೆ ಸಾಲುಗಟ್ಟಿ ನಿಂತಂತಹ ಆ ಮೂಕ ಪ್ರಾಣಿಗಳು ಭಯಭೀತವಾಗಿ ತಪ್ಪಿಸಿಕೊಳ್ಳಲು ಚಟಪಟಿಸುತ್ತವಂತೆ.

ಆ ದೃಶ್ಯವು ಅತ್ಯಂತ ಭಯಂಕರವೂ ಜೊತೆಜೊತೆಗೇ ಕರುಣಾಜನಕವೂ ಆಗಿರುತ್ತದಂತೆ. ಪತ್ರಿಕೆಗಳಲ್ಲಿ ಬಂದ ಕೆಲವು ಚಿತ್ರಗಳನ್ನು ಬಿಟ್ಟರೆ ಅಂಥ ದೃಶ್ಯ ನೋಡುವ ಅವಕಾಶವು ನನಗೆ ಬಂದಿಲ್ಲ. ಮಾಂಸಾಹಾರಿ ಜನರು ತಮ್ಮ ಆಹಾರಕ್ಕಾಗಿ ಪ್ರಾಣಿವಧೆಯನ್ನು ಪ್ರೋತ್ಸಾಹಿಸುವುದು ಕಟುಸತ್ಯವಾದರೂ ಮರೆಯಲ್ಲಿ ವಧೆ ಮಾಡುವುದು ಮತ್ತು ತೀರಾ ಕ್ರೂರವಾಗಿ ಮಾಡದಿರುವುದನ್ನು ರೂಢಿಸಿಕೊಳ್ಳುವುದು ಒಳ್ಳೆಯದು. ಪ್ರತಿಯೊಂದು ಜೀವಿಯ ಬದುಕನ್ನು ಗೌರವಿಸುವ, ಬದುಕುವ ಹಕ್ಕನ್ನು ಮನ್ನಿಸುವ ತಿಳುವಳಿಕೆ ಮೂಡಿ, ಮಾನವೀಯ ಸ್ಪಂದನ ಮಿಡಿಯುವವರೆಗೆ ಅವರು ಮಾಂಸಾಹಾರಿಗಳಾಗಿಯೇ ಇರಲಿ; ಆದರೆ ಅಲ್ಲಿಯವರೆಗೂ ತನಗೆ ಸುಖದುಃಖ ಇರುವಂತೆ ಪ್ರಾಣಿಗಳಿಗೂ ಇದೆ ಎಂಬುದನ್ನು ಅರಿಯಲಿ. ಅಕ್ಕಮಹಾದೇವಿ ಹೇಳುತ್ತಾಳೆ :

> **ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ**
> **ಹಲವು ಪ್ರಾಣಿಯ ಕೊಂದು ನಲಿನಲಿದಾಡುವ**
> **ತನ್ನ ಮನೆಯಲ್ಲೊಂದು ಶಿಶುವು ಸತ್ತಡೆ**
> **ಆದಕ್ಕೆ ಮರುಗುವಂತೆ ಅವಕ್ಕೇಕೆ ಮರುಗನು ?**

ಎರಡನೆಯದಾಗಿ ದೇವರ ಹೆಸರಿನಲ್ಲಿ ಪ್ರಾಣಿಬಲಿ ಕೊಡುವುದಂತೂ ತೀರಾ ಹಾಸ್ಯಾಸ್ಪದ. ತಮ್ಮ ಮಗುವನ್ನು ತಮಗೆ ಬಲಿಕೊಡಲು ಯಾವುದೇ ತಾಯಿತಂದೆ ಹೇಗೆ ಇಷ್ಟಪಡುವುದಿಲ್ಲವೋ ಹಾಗೆ ಯಾವ ದೇವತೆಯೂ ಇಷ್ಟಪಡುವುದಿಲ್ಲ. ಅನಾಗರಿಕ ದೆಸೆಯಲ್ಲಿದ್ದಾಗ ರೂಢಿಗೆ ಬಂದ ಇಂಥ ಕ್ರೂರ ಮತ್ತು ಕ್ಷುದ್ರ ಆಚರಣೆಗಳು ಇಂದೂ ಉಳಿದು ಬಂದಿರುವುದು ಮತ್ತು ಹೊಸ ಹೊಸ ರೂಪ ಪಡೆದು ವಿಜೃಂಭಿಸುತ್ತಿರುವುದು ವಿಷಾದನೀಯ. ಕೆಲವು ಜನರು ಉದ್ದೇಶಪೂರ್ವಕವಾಗಿ ಪ್ರೋತ್ಸಾಹಿಸಿ ಹೇಳುವರು, ''ನಾವೇನು ಲಿಂಗಾಯತರೇ, ಜೈನರೆ ? ಪ್ರಾಣಿಗಳನ್ನು ಕಡಿಯದೆ, ತಿನ್ನದೇ ಇರಲು? ಇದು ನಮ್ಮ ಜಾತಿ ಧರ್ಮ!'' ಎಂದು ಅಹಿಂಸಾವಾದಿಗಳನ್ನು ವಿಡಂಬಿಸುವರು. ಎಲ್ಲ ಮಾನವರೂ ಒಂದು

ಕಾಲದಲ್ಲಿ ಮಾಂಸಾಹಾರಿಗಳೆ. ಮಹಾತ್ಮರ ಪ್ರಭಾವದಿಂದ ಕಾಲಾನುಕಾಲಕ್ಕೆ ಅಹಿಂಸಾತ್ಮಕ ಧರ್ಮಗಳಾದ ಜೈನ, ಬೌದ್ಧ, ಲಿಂಗಾಯತ ಮುಂತಾದುವನ್ನು ಸ್ವೀಕರಿಸಿ ಸಸ್ಯಾಹಾರದ ಜೀವನ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆ.

ಮಾನವ ಸಮಾಜವು ಮೊದಲು ಚಿಕ್ಕ ಚಿಕ್ಕ ಗುಂಪುಗಳಾಗಿದ್ದು ಕುಲ, ಬಣ, ಜಾತಿ ಮುಂತಾಗಿ ಹುಟ್ಟಿನ ಆಧಾರದಲ್ಲಿ ಸಂಘಟಿತವಾಗುತ್ತಿತ್ತು. ನಂತರ ಧರ್ಮಗಳು ಹುಟ್ಟಿದವು. ವೈದಿಕ ಮತ್ತು ಯಹೂದಿ ಧರ್ಮಗಳು ಎಲ್ಲರಿಗೂ ಧರ್ಮ ಸಂಸ್ಕಾರ ಕೊಡಲು ಮನಸ್ಸು ಮಾಡಲಿಲ್ಲ. ಅವಕ್ಕೆ ಪ್ರತಿಸ್ಪರ್ಧಿಗಳಾಗಿ ಭಾರತದಲ್ಲಿ ಬೌದ್ಧ, ಜೈನ, ಲಿಂಗಾಯತ ಮತ್ತು ಸಿಖ್ ಧರ್ಮಗಳು ಮತ್ತು ಅನೇಕ ಪಂಥಗಳು ಹುಟ್ಟಿದರೆ ಭಾರತದ ಹೊರಗೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಹುಟ್ಟಿದವು. ಹಾಗೆ ಹುಟ್ಟಿದ ಧರ್ಮಗಳ ತೆಕ್ಕೆಗೆ ಹಳೆಯ ಬಣಗಳು, ಬುಡಕಟ್ಟುಗಳು ಸೇರಿಕೊಂಡವು. ಈ ಹೊಸ ಧರ್ಮಗಳಲ್ಲಿ ಬಂದು ಸೇರಿದರೂ ಕೆಲವು ಜನರು ತಮ್ಮ ಹಳೆಯ ನಂಬಿಕೆ ಆಚರಣೆಗಳನ್ನು ಬಿಟ್ಟುಕೊಡದೆ ಹೊಸ ಧರ್ಮದ ಸಮಾಜಗಳೂ ಕಲುಷಿತಗೊಂಡವು. ಈ ಕಲಬೆರಕೆ ಭಾರತ ದೇಶದಲ್ಲಿ ಅನ್ಯ ದೇಶಗಳಿಗಿಂತಲೂ ಬಹಳ. ಒಂದು ಶುದ್ಧ ಸಸ್ಯಾಹಾರಿ ಲಿಂಗಾಯತರ ಒಳಪಂಗಡದವರಲ್ಲಿ ಸಮಾಧಿಯೊಳಕ್ಕೆ ಶವ ಇಡುವ ಮುನ್ನ ಕೋಳಿಯನ್ನು ಕೊಯ್ದು ಹಾಕಿ ನಂತರ ಶವ ಇಡುವರೆಂಬುದನ್ನು ತಿಳಿದು ನಾನು ಬೆಕ್ಕಸಬೆರಗಾದೆ. ಆ ಜನರು ಲಿಂಗಾಯತ ಧರ್ಮವನ್ನು ಶತಮಾನಗಳ ಹಿಂದೆ ಸ್ವೀಕರಿಸಿದ್ದಾರೆ. ಆ ಸ್ವೀಕರಣೆಗೆ ಮೊದಲು ಅವರು ಸಸ್ಯಾಹಾರಿ ವರ್ಣ(ಜಾತಿ)ದವರು. ಈ ಕೋಳಿ ಬಲಿ ಆಚರಣೆ ಹೇಗೆ ಇವರಲ್ಲಿ ತೂರಿರಬಹುದು.ದಾವಣಗೆರೆ, ರಾಣಿಬೆನ್ನೂರು ಮತ್ತು ಇತ್ತೀಚೆಗೆ ಪ್ರಾಣಿಬಲಿ ತಪ್ಪಿದ ಬೊಮ್ಮಸಾಗರದ ಪರಿಸರದಲ್ಲಿ ಲಿಂಗಾಯತ ಸಮಾಜವೇ ಅಧಿಕವಾಗಿದೆ. ಆದರೆ ಅಲ್ಲಿ ಇರುವ ದುರ್ಗಿ, ಮಾರಿಯರ ಆಟಾಟೋಪ ಬಣ್ಣಿಸಲಸದಳ. ಅತ್ಯಂತ ಉಗ್ರರೀತಿಯಲ್ಲಿ ಸಹಸ್ರಾರು ಪ್ರಾಣಿಗಳ ಬಲಿ ನಡೆಯುತ್ತದೆ. ಹರಕೆ ಮಾಡಿಕೊಂಡು ಕೋಣ, ಕುರಿ, ಕೋಳಿಗಳನ್ನು ಒಯ್ಯುವ ಮೂಢ ಜನರಲ್ಲಿ ಲಿಂಗಾಯತರೂ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ ಎಂಬುದು ವಿಷಾದನೀಯವಾದರೂ ಸತ್ಯ.

ಶ್ರೀ ದಯಾನಂದ ಸ್ವಾಮಿಗಳು ಇಂಥ ಒಂದು ಹೋರಾಟದ ಸಂದರ್ಭದಲ್ಲಿ ದೂರವಾಣಿ ಮೂಲಕ ಹೇಳಿದರು : ''ಒಂದು ದುರ್ಗಾದೇವಿಗೆ ಪ್ರಾಣಿ ಬಲಿ ನಡೆಯುತ್ತಿದ್ದು ಇದನ್ನು ತಪ್ಪಿಸಲು ಪ್ರಾಣಿ ದಯಾ ಸಂಘದವರು ಹೋರಾಡುತ್ತಿದ್ದೇವೆ. ದಲಿತ ಸಂಘಟನೆಗಳವರು ಬೆಂಬಲ ನೀಡುತ್ತಿದ್ದಾರೆ. ಆದರೆ ಲಿಂಗಾಯತರು ಪ್ರಾಣಿ ಬಲಿ ನಡೆಯಬೇಕೆಂದು ಆಗ್ರಹಿಸುತ್ತಿದ್ದಾರೆ''. ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಅನೇಕ ಲಿಂಗಾಯತರಿಗೆ ಧರ್ಮಗುರು ಬಸವಣ್ಣನವರ ತತ್ತ್ವದ ಸೋಂಕು ಸಹ ಬಡಿದಿಲ್ಲ ಮತ್ತು ಸಾಮಾಜಿಕ ಪ್ರಜ್ಞೆ-ವೈಚಾರಿಕ ಜಾಗೃತಿಯಲ್ಲಿ ದಲಿತರಿಗಿಂತಲೂ ಕೆಳಗೇ ಇದ್ದಾರೆ ಎಂಬುದು.

''ಫೆಬ್ರವರಿ 4ರ ಬೆಳಗಿನ ಜಾವದಿಂದ ಬೊಮ್ಮಸಾಗರದಲ್ಲಿ ಪ್ರಾಣಿವಧೆ ಆರಂಭವಾಗಲಿದೆ. ಗದಗ್ ಜಿಲ್ಲಾಡಳಿತದವರು 144 ಜಾರಿ ಮಾಡಿರುವುದೇ ಅಲ್ಲದೆ ಸ್ವಯಂ

Digitalized by e-Sahithya Documentation Forum
Sponsored by Sarayu Foundation Trust

ಸೇವಾ ಸಂಘಗಳ ನೆರವಿನಿಂದ ಕಾನೂನು ಪ್ರಕಾರ ಬಲಿಯನ್ನು ತಡೆಗಟ್ಟಲು ಸಿದ್ಧರಿದ್ದಾರೆ. ಆದ್ದರಿಂದ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರನ್ನು ಕಳಿಸಿರಿ'' ಎಂದು ದಯಾನಂದ ಸ್ವಾಮಿಗಳಿಂದ ಫೋನ್ ಬಂದಿತು. ಸಮಯವು ಬಹಳ ಕಡಿಮೆ ಇತ್ತು. ಎಲ್ಲಿ ರಾಷ್ಟ್ರೀಯ ಬಸವ ದಳದವರಿಗೆ ತಿಳಿಸಲು ಸಾಧ್ಯವೇ ಇರಲಿಲ್ಲ. ಗದಗಿಗೆ ಸಮೀಪವಿರುವ ಧಾರವಾಡ, ಹುಬ್ಬಳ್ಳಿ ಮತ್ತು ಕೊಪ್ಪಳ ರಾಷ್ಟ್ರೀಯ ಬಸವ ದಳದವರಿಗೆ ಫೋನ್ ಮಾಡಿದಾಗ ರಾತ್ರಿ 10 ಗಂಟೆ ದಾಟಿತ್ತು. ಇವರೆಲ್ಲ ಮರುದಿವಸ 10ರ ಒಳಗಾಗಿ ರೋಣದ ತಹಸೀಲ್ದಾರ್ ಆಫೀಸ್ ಬಳಿ ಇರಬೇಕಿತ್ತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಬೆಳಗಾಂವಗೆ ಪ್ರವಚನಕ್ಕೆ ಹೋಗುವ ಮಾರ್ಗದಲ್ಲಿ ವಾಸ್ತವ್ಯ ಮಾಡಿದ್ದರು. ಫೋನ್ ಮಾಡಿ ಅವರಿಗೂ ಬೊಮ್ಮಸಾಗರಕ್ಕೆ ಹೋಗಲು ತಿಳಿಸಿದೆವು. ಅವರು ಸಿದ್ಧರಾಗುವ ವೇಳೆಗೆ ಬೆಂಗಳೂರಿನಿಂದ ಪಿ.ಆರ್.ಎಲ್ ಮೂಲಕ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳನ್ನು ಕಳಿಸಲಾಯಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಕಾಣುತ್ತಲೇ ಕಾರ್ಯಕರ್ತರ ಉತ್ಸಾಹ ಸೂರ್ಮಡಿಸಿತು. ಜೈನ ಸಮಾಜದ ಮುಂದಾಳುಗಳು ಗೌರವಯುತವಾಗಿ ಮಾತಾಜಿಯವರನ್ನು ಬರಮಾಡಿಕೊಂಡರು. ಬಂದ ಸ್ವಯಂ ಸೇವಕರು ಮತ್ತು ಕಾರ್ಯಕರ್ತರಲ್ಲದೆ ಒಂದು ಸಾವಿರಕ್ಕೂ ಮಿಕ್ಕಿದ ಪೋಲೀಸ್ ಪಡೆಗೆ ರೋಣದಲ್ಲಿಯೇ ಆಹಾರದ ವ್ಯವಸ್ಥೆ ಮಾಡಲಾಗಿತ್ತು. ರೋಣದ ಗುಲಗಂಜಿ ಮಠದಲ್ಲಿ ವಾಸ್ತವ್ಯ ಮತ್ತು ಊಟೋಪಚಾರದ ವ್ಯವಸ್ಥೆ ಇತ್ತು. ತಹಸೀಲ್ದಾರ್ ಶ್ರೀ ಹಿರೇಮಠರ ಮೇಲೆ ಬಹುದೊಡ್ಡ ಜವಾಬ್ದಾರಿ. ಡಿ.ಸಿ., ಪೋಲೀಸ್ ಅಧಿಕಾರಿಗಳು ಎಲ್ಲರಿಗೂ ಏನಾದೀತೋ ಎಂಬ ಆತಂಕ. ಈ ಮಧ್ಯೆ ಮೂಢ ಭಕ್ತರಿಗೆ ಆಕ್ರೋಶ. ''ಇದು ನಮ್ಮ ಸಂಪ್ರದಾಯ; ಇದನ್ನು ಯಾರೂ ತಪ್ಪಿಸಬಲ್ಲರು? ನಾವು ಬಲಿ ಕೊಟ್ಟೇ ತೀರುತ್ತೇವೆ ''ಎಂಬ ಹಠ.

ಬೊಮ್ಮಸಾಗರ ತಲುಪಬಹುದಾದ ಏಳೆಂಟು ಮಾರ್ಗಗಳಲ್ಲಿ ಪೋಲೀಸ್ ಚೆಕ್ ಪೋಸ್ಟ್‌ಗಳನ್ನು ಹಾಕಿ ಪೋಲೀಸರ ಸರ್ಪಗಾವಲು ಹಾಕಿದ್ದಲ್ಲದೆ, ದೇವಾಲಯಕ್ಕೂ ಪೋಲೀಸ್ ಕಾವಲು. ಪ್ರಾಣಿಗಳನ್ನು ಬಲಿ ಕೊಡಲು ತರುವವರನ್ನು ತಡೆದು ಪ್ರಾಣಿಗಳನ್ನು ಸರಕಾರಿ ಸಂರಕ್ಷಿತ ಗೋಶಾಲೆಗಳಿಗೆ ಕಳಿಸಲು ಚೆಕ್ ಪೋಸ್ಟಿನಲ್ಲಿ ವಾಹನಗಳ ಸಿದ್ಧತೆ. ಬಲಿ ಕೊಡಲು ಪ್ರಾಣಿಗಳನ್ನು ತರುವವರನ್ನು ಬಂಧಿಸಿ ಲಾಕಪ್‌ಗೆ ಕಳಿಸಲು ಚೆಕ್ ಪೋಸ್ಟ್‌ಲ್ಲಿ ಗಾಡಿಗಳು. ಸತತವಾಗಿ ಎಲ್ಲ ಗ್ರಾಮಗಳಿಗೆ ಈ ಸುದ್ದಿಯ ರವಾನೆ.

ಪೂಜ್ಯ ಶ್ರೀ ಗಂಗಾ ಮಾತಾಜಿ, ಶ್ರೀ ದಯಾನಂದ ಸ್ವಾಮಿ, ಶ್ರೀ ಚನ್ನಬಸವಾನಂದ ಸ್ವಾಮಿಗಳು ಪೋಲೀಸ್ ಚೆಕ್ ಪೋಸ್ಟ್ ಪಾಯಿಂಟ್‌ಗಳಿಗೆ ಹೋಗಿ ಉಪನ್ಯಾಸಗಳನ್ನು ಮಾಡಿ ಜೀವಹತ್ಯೆಯ ತಡೆಯು ಎಂಥಾ ಪವಿತ್ರ ಕಾರ್ಯ ಎಂಬ ಬಗ್ಗೆ ಉಪನ್ಯಾಸ ಮಾಡುತ್ತಿದ್ದರು. ಆ ದೃಶ್ಯವು ''ಯುದ್ಧರಂಗದಲ್ಲಿನ ಸಂಚಾರದಂತಿತ್ತು'' ಎಂದು ಪೂಜ್ಯ ಶ್ರೀ ಗಂಗಾ ಮಾತಾಜಿ ಹೇಳಿದರು. ಬಲಿ ಪೀಠವಿರುವ ದುರ್ಗಿಯ ಗುಡಿಯಿಂದ ಸ್ವಲ್ಪ ದೂರದಲ್ಲಿ ಒಂದು ಜಾಗದಲ್ಲಿ

ದೇವಿಯ ಹೇಳಿಕೆ ಆಗುವುದಂತೆ. ಭಕ್ತರು ಸ್ವಯಂ ಸೇವಕರಿಗೆ, ಅಧಿಕಾರಿಗಳಿಗೆ ಹೇಳಿದರಂತೆ, ''ದೇವಿ, ಬಲಿಯು ಬೇಡವೆಂದರೆ ಮಾತ್ರ ನಾವು ಬಿಡುತ್ತೇವೆ''. ಎಲ್ಲರೂ ಕುತೂಹಲದಿಂದ ನಿಂತು ಆಲಿಸುವಾಗ ದೇವಿಯು ಮೈಮೇಲೆ ಬಂದು ಪೂಜಾರಿಯ ಮೂಲಕ 'ಬಲಿ ಬೇಡ' ಎಂದು 3 ಸಲ ಹೇಳಿದಾಗ ಭಕ್ತರು ಒಪ್ಪಿಕೊಂಡರಂತೆ; ಅಧಿಕಾರಿಗಳು ನೆಮ್ಮದಿಯ ಉಸಿರು ಬಿಟ್ಟರಂತೆ. ಯಾವಾಗಲೂ ರಾತ್ರಿ 12ರ ನಂತರ ಬಲಿ ಆರಂಭವಾಗಿ ಮರುದಿನ ಮಧ್ಯಾಹ್ನ 4ರವರೆಗೆ ಅವ್ಯಾಹತವಾಗಿ ನಡೆಯುವುದಲ್ಲದೆ ರಕ್ತದ ಕಾಲುವೆ ತುಂಬಿ ಹರಿಯುತ್ತಿತ್ತಂತೆ. ಅಂಥ ಕ್ರೂರ ಘಟನೆಗೆ ಈ ಬಾರಿ ಅವಕಾಶ ಸಿಗಲಿಲ್ಲ.

ಬೆಳಗಿನಿಂದ ಸುತ್ತಿ ಸುತ್ತಿ ಆಯಾಸದಿಂದ ತಡವಾಗಿ ರಾತ್ರಿಯಲ್ಲಿ ಕೊಂಚ ವಿಶ್ರಾಂತಿಗೆ ಸ್ವಾಮೀಜಿಯವರು ಕಣ್ಣು ಮುಚ್ಚುತ್ತಿದ್ದಂತೆಯೇ ಬಲಿಗೆ ತಯಾರಿ ನಡೆದಿದೆ ಎಂಬ ಸುದ್ದಿ ಬಂದಿತಂತೆ. ಅಧಿಕಾರಿಗಳು ಪೂಜ್ಯ ಗಂಗಾ ಮಾತಾಜಿ ಮತ್ತು ಇನ್ನಿತರ ರಾಷ್ಟ್ರೀಯ ಬಸವ ದಳದ ಮಹಿಳೆಯರನ್ನು ಐ.ಬಿ.ಯಲ್ಲೇ ಉಳಿಸಿ, ಸ್ವಾಮೀಜಿಗಳನ್ನು ಕರೆದುಕೊಂಡು ಧಾವಿಸಿದರಂತೆ. ಕಾವಿಧಾರಿ ಸ್ವಾಮಿಗಳು ಬಿಳಿಯ ಶಾಲು ಹೊದ್ದು ಅಧಿಕಾರಿಗಳೊಡನೆ ಸ್ಥಳಕ್ಕೆ ಧಾವಿಸಿದರಂತೆ. ಅಲ್ಲಿ ಯಾವ ಬಲಿಯೂ ನಡೆದಿರಲಿಲ್ಲ. ದೇವಿಗೆ ಹಣ್ಣಿನ ನೈವೇದ್ಯ ಮಾತ್ರ ಇಡಲಾಗಿತ್ತಂತೆ. ಇದನ್ನು ಕಂಡ ಎಲ್ಲರಿಗೂ ಸಂತೋಷವಾಯಿತಂತೆ. ಮರುದಿನ ಪತ್ರಿಕೆಗಳವರು, ಟಿ.ವಿ. ಮಾಧ್ಯಮದವರು ಹೋಗಿ ಸ್ವತಃ ಕಣ್ಣಾರೆ ಕಂಡು ಸಹರ್ಷದಿಂದ ಪೂಜ್ಯ ಶ್ರೀ ಗಂಗಾ ಮಾತಾಜಿಯವರ ಬಳಿ ಸಂತೋಷವನ್ನು ಹಂಚಿಕೊಂಡರಂತೆ.

ಪತ್ರಿಕೆಯೊಂದರ ಕುಚೋದ್ಯ : ಒಂದು ಪತ್ರಿಕೆಯ ವರದಿಗಾರ ಮಾತ್ರ ಈ ಯಶಸ್ಸನ್ನು ಕಂಡು ಸಂತೋಷಿಸದೆ, ಎರಡು ಕಿಲೋಮೀಟರ್ ದೂರದಲ್ಲಿ ಒಂದು ಪ್ರಾಣಿಯ ವಧೆಯಾಯಿತು ಎಂದು ಸುಳ್ಳುವರದಿ ಮಾಡಿ ಅಧಿಕಾರಿಗಳಿಂದ ಬೈಸಿಕೊಂಡನಂತೆ. ಪ್ರಾಣಿ ಬಲಿ ತಡೆಯಲ್ಪಟ್ಟ ಸಂತೋಷದ ಸಂಗತಿ ತಿಳಿದು ನಾನು ಬೆಂಗಳೂರಿನಿಂದ ರೋಣದ ತಹಸೀಲ್ದಾರರಿಗೆ ಫೋನ್ ಮಾಡಿ ಅಭಿನಂದಿಸಿ ''ಕಾನೂನನ್ನು ಸರಿಯಾಗಿ ಜಾರಿಗೆ ತಂದರೆ ಎಷ್ಟೋ ಒಳ್ಳಿತಾಗುವುದು'' ಎಂದು ಹೇಳಿದೆ. ಸಂಜೆ 4ರವರೆಗೆ ಬಲಿಯ ಅವಧಿ ಇದ್ದುದರಿಂದ ಕಾರ್ಯಕರ್ತರೆಲ್ಲ ಅಲ್ಲಿಯವರೆಗೆ ಇದ್ದು, ನಂತರ ತಮ್ಮ ತಮ್ಮ ಊರುಗಳಿಗೆ ತೆರಳಿದರು.

ಅಭಿನಂದನಾರ್ಹರು

ಈ ದಿಶೆಯಲ್ಲಿ ಜೈನ ಸಮಾಜದವರು ಪ್ರಾಣಿ ದಯಾಸಂಘದ ವತಿಯಿಂದ ಸಾಕಷ್ಟು ಖರ್ಚು ಮಾಡಿಕೊಂಡು ದುಡಿಯುತ್ತಾರೆ. ಇದೊಂದು ಅನುತ್ಪಾದಕ ವೆಚ್ಚ; ಸಮಯ, ಶಕ್ತಿ, ಹಣ ಮೂರನ್ನು ಕಬಳಿಸುತ್ತದೆ. ಆದರೂ ದಯೆಯನ್ನು ಅಭಿವ್ಯಕ್ತಗೊಳಿಸಲು ಜೈನ ಮುಖಂಡರಾದ ಶ್ರೀ ಉತ್ತಮ ಚಂದ್‌ರಂಥವರು ಹಗಲಿರುಳು ದುಡಿಯುತ್ತಾರೆ. ಈ ಕೆಲಸದಲ್ಲಿ ಸಾರಥ್ಯ ವಹಿಸಿರುವ ಶ್ರೀ ದಯಾನಂದ ಸ್ವಾಮಿಗಳ ಕ್ರಿಯಾ ಶಕ್ತಿ ಅದ್ಭುತವಾಗಿ ಕೆಲಸ ಮಾಡುತ್ತದೆ. ಅವರು ಹೋಗಿ ಜಿಲ್ಲಾಡಳಿತ, ಪೋಲೀಸ್ ಇಲಾಖೆಯವರನ್ನು ಸಂಪರ್ಕಿಸಿ, ಕಾನೂನನ್ನು ನೆನಪಿಸಿ ಪ್ರಾಣಿವಧೆ ತಡೆಗಟ್ಟಲು ಪ್ರೇರಣೆ ನೀಡಿದರು.

Digitalized by e-Sahithya Documentation Forum
Sponsored by Sarayu Foundation Trust

ಜಿಲ್ಲಾಡಳಿತ, ತಹಸೀಲ್ದಾರ್ ಮತ್ತು ಪೋಲೀಸ್ ಇಲಾಖೆ ಮನಸ್ಸು ಮಾಡದಿದ್ದರೆ ಈ ಕಾಲದಲ್ಲಿ ಕೇವಲ ಸಾತ್ವಿಕ ಶಕ್ತಿ ಕೆಲಸ ಮಾಡದು. ಈ ಬಗ್ಗೆ ನಾನು ನನ್ನಲ್ಲೇ ಆಲೋಚಿಸುತ್ತಿದ್ದೇನೆ. ಹಿಂದೆ 12ನೆಯ ಶತಮಾನದಲ್ಲಿ ತೀವ್ರಗತಿಯಲ್ಲಿ ಸಾಮಾಜಿಕ ಪರಿವರ್ತನೆ ತರಲು ಬಸವಣ್ಣನವರು ಸನ್ನದ್ಧರಾದಾಗ, ಪ್ರಾಣಿ ಬಲಿ ತಪ್ಪಿಸುವುದಕ್ಕೆ ಶರಣರು ಗಣಾಚಾರ ಕೈಗೊಳ್ಳುತ್ತಿದ್ದರು. ಶರಣರ ನಿಸ್ಪೃಹತೆ ನೋಡಿ ಮೂಢಜನರು ಪರಿವರ್ತನೆಗೊಳ್ಳುತ್ತಿದ್ದರು. ಆಗ ಸೈನ್ಯವಂತೂ ಸಮಾಜ ಪರಿವರ್ತನೆಯ ಕಾರ್ಯಕ್ಕೆ ಬೆಂಬಲ ನೀಡುತ್ತಿರಲಿಲ್ಲ. ಗಣಾಚಾರದ ಮೂಲಕ ಸಾಕಷ್ಟು ಪ್ರಾಣಿಬಲಿಯನ್ನು ತಡೆಗಟ್ಟಿದ್ದನ್ನು ಕಾಣುತ್ತೇವೆ. ಆದರೆ ಇಂದು ವ್ಯಕ್ತಿಯು ಸಾಕಷ್ಟು ಶಿಕ್ಷಿತನಾಗಿದ್ದಾನೆ. ಪ್ರಜಾಪ್ರಭುತ್ವವಿದೆ, ಕಾನೂನಿದೆ. ಆದರೆ ಕೆಲವು ಜನ ಮಂತ್ರಿಗಳು, ಶಾಸಕರು ರಾಜಕೀಯ ಪ್ರೇರಿತರಾಗಿ ಲಿಂಗಾಯತರನ್ನು ದ್ವೇಷಿಸುವಂತೆ ನಾವೇನು ಜೈನರೆ ? ಲಿಂಗಾಯತರೆ ? ಎಂದು ಛಲ ತೊಟ್ಟು ನಿಂತು ಸ್ತ್ರೀದೇವತೆಗಳಿಗೆ ಪ್ರಾಣಿಗಳ ಬಲಿ ಕೊಡುವುದನ್ನು ಕಂಡಿದ್ದೇವೆ. ಅಂದರೆ 12 ಶತಮಾನದ ಜನರಿಗಿಂತಲೂ ಇಂದಿನ ಶತಮಾನದ ಜನರು ಸುಧಾರಿಸಿದವರು, ಸುಶಿಕ್ಷಿತರು ಎಂದು ಹೇಗೆ ಹೇಳಲು ಸಾಧ್ಯ ?

ಈ ದೃಷ್ಟಿಯಲ್ಲಿ ಗದಗ್ ಜಿಲ್ಲಾಡಳಿತ, ತಹಸೀಲ್ದಾರ್, ಪೋಲೀಸ್ ಇಲಾಖೆ ಉತ್ಸಾಹದಿಂದ ನಿಂತು ಎಲ್ಲ ಸಿದ್ಧತೆಗಳೊಡನೆ ಸ್ವಯಂ ಸೇವಾ ಸಂಘಗಳವರನ್ನು ಪ್ರೋತ್ಸಾಹಿಸಿ ಅಮಾನುಷವಾದ ಪ್ರಾಣಿ ಬಲಿ ತಡೆಗಟ್ಟಿದ್ದು ಅಭಿನಂದನಾರ್ಹ! ಈ ಪ್ರಸಂಗವು ಇಡೀ ರಾಜ್ಯಕ್ಕೆ, ರಾಷ್ಟ್ರಕ್ಕೆ ಮಾದರಿಯಾಗಿ ನಿಂತು ಎಲ್ಲೇ ಆಗುವ ಪ್ರಾಣಿವಧೆಯು ನಿಲ್ಲುವಂತಾಗಲೆಂದು ಹಾರೈಕೆ. ಮಾನ್ಯ ದೇವೇಗೌಡರಂಥವರು ಒಮ್ಮೆ ಕೋಣದ ಆಹುತಿ ಮಾಡಲು ಸಿದ್ಧವಾಗಿದ್ದುದಾಗಿ ಪತ್ರಿಕೆಗಳಲ್ಲಿ ಬಂದಿತು. ಜೀವ ಹತ್ಯೆ ಮಾಡಿ ಪುಣ್ಯಗಳಿಸಿಕೊಳ್ಳಲು ಸಾಧ್ಯವೆ ? ಎಂಬ ತಿಳುವಳಿಕೆ ಅತ್ಯಗತ್ಯ.

ರಾಷ್ಟ್ರೀಯ ಬಸವ ದಳಗಳವರು ಬಸವ ಧರ್ಮ ಪೀಠವು ಕರೆನೀಡುತ್ತಲೇ ತಮ್ಮ ವೈಯಕ್ತಿಕ ಕಾರ್ಯ ಬದಿಗಿಟ್ಟು ಆದೇಶ ನೀಡಿದಲ್ಲಿಗೆ ಹೋಗುವ ನಿಷ್ಠಾವಂತರು. ಅತ್ಯಂತ ಕಡಿಮೆ ಅವಧಿಯಲ್ಲಿ, ರಾತ್ರಿ 10 ಗಂಟೆಗೆ ದೂರವಾಣಿಯಲ್ಲಿ ತಿಳಿಸಿದಾಗಲೂ, ಫೋನ್ ಸಂಪರ್ಕ ಇದ್ದವರಿಗೆ ತಿಳಿಸಿ ಬೆಳಿಗ್ಗೆ 8 ಗಂಟೆಗೆಲ್ಲ ಸಿದ್ಧರಾಗಿ ಧಾರವಾಡ ಹುಬ್ಬಳ್ಳಿ, ಕೊಪ್ಪಳದವರು ಹೊರಟು ನಿಂತರು. ಬೆಂಗಳೂರಿನಿಂದ ನಾನು ಒಂದು ಸೂಚನೆ ನೀಡುತ್ತಲೇ ಸ್ವಲ್ಪವೂ ಅಂಜದೆ, ಅಳುಕದೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಹೊರಟರು. ''ಆ ದೇವಿಯನ್ನು (ದುರ್ಗಾ) ಪರಿವರ್ತಿಸಲು ಈ ದೇವಿ (ಗಂಗಾದೇವಿ) ಬಂದರು'' ಎಂದು ಜೈನ ಸಮಾಜದ ಹಿರಿಯರು ಸಂತೋಷದಿಂದ ಉದ್ಗರಿಸಿದರಂತೆ. ಹೀಗಾಗಿ ಪೂಜ್ಯ ಮಾತೆ ಗಂಗಾದೇವಿಯವರು ಮತ್ತು ರಾಷ್ಟ್ರೀಯ ಬಸವ ದಳ ಈ ಸಂದರ್ಭದಲ್ಲಿ ಎಲ್ಲರ ಪ್ರಶಂಸೆಗೆ ಪಾತ್ರರಾದರು; ಅಭಿನಂದನಾರ್ಹರಾದರು.

ಅಂದಾಗ ಪ್ರಾಣಿಗಳೆಲ್ಲವೂ ಬಸವಣ್ಣನವರಿಗೆ ಪ್ರಣಾಮಗೈಯುತ್ತ ಜೀವಿಗಳೆಲ್ಲವೂ ಜಯ, ಜೀಯಾ ಎನ್ನುತ್ತಿದ್ದರೆ ಉತ್ಪ್ರೇಕ್ಷೆಯಲ್ಲವಷ್ಟೆ ?!



ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ ಧ್ವಜಾರೋಹಣದಲ್ಲಿ ಪೂಜ್ಯ ಮಾತಾಜಿ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ ಮತ್ತು ಇತರ ಶರಣರು.



ದಿ. 9-1-2004 ರಂದು ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮದಲ್ಲಿ ವಚನ ಪಠಣವನ್ನು ಮಾಡುವ ಮೂಲಕ ಉದ್ಘಾಟಿಸಿದ ಪೂಜ್ಯ ಮಾತಾಜಿಯವರು.

Digitalized by e-Sahithya Documentation Forum
Sponsored by Sarayu Foundation Trust

ದಿ. 13-1-2004 ರಂದು ನಡೆದ ರಾಷ್ಟ್ರೀಯ ಬಸವ ದಳ ಅಧಿವೇಶನದಲ್ಲಿ ಪೂಜ್ಯ ಮಾತಾಜಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತಿರುವುದು.

ದಿ. 12-1-2004 ರಂದು ಶರಣ ಮೇಳ ಉದ್ಘಾಟನೆ ಶರಣ. ಪ್ರೊ. ಕೆ.ಎಸ್. ಭಗವಾನ್‌ರವರಿಂದ. ಜೊತೆಯಲ್ಲಿರುವವರು ಶರಣ. ಸಂಗಣ್ಣಕರಡಿ.

ದಿ. 12-1-2004 ರ ಕಾರ್ಯಕ್ರಮದಲ್ಲಿ ಗುರು ಬಸವ ಪೂಜೆಯನ್ನು ಮಾಡುತ್ತಿರುವ ಇನ್‌ಫೋಟೆಕ್ ನಿರ್ದೇಶಕಿ ಶರಣೆ. ಶಾಂತ ಕುಮಾರಿ.

ದಿ. 13-1-04 ರಂದು ಧ್ವಜಾರೋಹಣ ಕಾರ್ಯಕ್ರಮ, ಧ್ವಜಗೀತೆ ಹೇಳಿಕೊಡುತ್ತಿರುವ ಪೂಜ್ಯ ಮಾತಾಜಿಯವರು, ಜೊತೆಯಲ್ಲಿ ಪೂಜ್ಯ ಬಸವ ಕುಮಾರ ಸ್ವಾಮೀಜಿ, ವಿಜಯ ಸಂಕೇಶ್ವರ, ಮಾನಸ ಗಂಗೋತ್ರಿ ಶಾಲೆಯ ಸಂಸ್ಥಾಪಕ ಬಸವರಾಜ್‌ರವರು, ಶ್ರೀಮತಿ ವಿಜಯ ಸಂಕೇಶ್ವರ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ.

Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯ ಮಾತಾಜಿ, ಶರಣ ವಿಜಯ ಸಂಕೇಶ್ವರ ಹಾಗೂ ಇನ್ನಿತರರನ್ನು ಶರಣ ಮೇಳ ವೇದಿಕೆಗೆ ಕರೆತರುತ್ತಿರುವುದು.

ದಿ. 13-1-04 ರಾಷ್ಟ್ರೀಯ ಬಸವ ದಳಗಳ 17ನೇ ಮಹಾಧಿವೇಶನ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಶರಣರಾದ ವಿಜಯಸಂಕೇಶ್ವರ ದಂಪತಿಗಳು. ಪೂಜ್ಯ ಮಾತಾಜಿಯವರು ಚಿತ್ರದಲ್ಲಿದ್ದಾರೆ.

ದಿ. 13-1-2004 ರಂದು ರಾಷ್ಟ್ರೀಯ ಬಸವ ದಳಗಳ 17ನೇ ಅಧಿವೇಶನ ಕಾರ್ಯಕ್ರಮ ಉದ್ಘಾಟನಾ ಸಮಾರಂಭ. ಪೂಜ್ಯ ಬಸವ ಕುಮಾರ ಸ್ವಾಮೀಜಿ, ಶರಣರಾದ ದೇವಿಕಾ ಶರಣಪ್ಪ, ಶ್ರೀಮತಿ ವಿಜಯ ಸಂಕೇಶ್ವರ, ಶ್ರೀ ವಿಜಯ ಸಂಕೇಶ್ವರ, ಪೂಜ್ಯ ಮಾತಾಜಿ ಮತ್ತು ಅಡಿವೆಪ್ಪ ಮಾಸೂರುರರು.

ಕನ್ನಡ ನಾಡು ಪಕ್ಷದ ಸಂಸ್ಥಾಪಕರಾದ ಶರಣ ವಿಜಯ ಸಂಕೇಶ್ವರ್‌ರವರಿಗೆ ಪೂಜ್ಯ ಮಾತಾಜಿಯವರು ಆಶೀರ್ವದಿಸುತ್ತಿರುವುದು.

Digitalized by e-Sahithya Documentation Forum
Sponsored by Sarayu Foundation Trust

ದಿ. 13-1-2004 ರಂದು ಸಂಜೆ ನಡೆದ ಪೂಜ್ಯ ಮಾತಾಜಿಯವರ ಪೀಠಾರೋಹಣ ಕಾರ್ಯಕ್ರಮ ಉದ್ಘಾಟನೆ ಶರಣ ಗೂಳಪ್ಪ ಎಸ್. ಶೆಟಕಾರ್ ರಿಂದ. ಪೂಜ್ಯ ಮಾತಾಜಿ, ಶರಣ ಪಾಂಡುರಂಗ ಸೂರ್ಯವಂಶಿರವರು ಚಿತ್ರದಲ್ಲಿದ್ದಾರೆ.



ಪೀಠಾರೋಹಣ ಕಾರ್ಯಕ್ರಮದಲ್ಲಿನ ಧ್ವಜಾರೋಹಣ : ಶರಣರಾದ ವೀರಣ್ಣ ಕೊರ್ಲಳ್ಳಿ, ಬಸವರಾಜ, ಪೂಜ್ಯರಾದ ಸಿದ್ಧರಾಮೇಶ್ವರ ಸ್ವಾಮೀಜಿ, ದಯಾನಂದ ಸ್ವಾಮೀಜಿ, ಬಸವ ಕುಮಾರ ಸ್ವಾಮೀಜಿ, ಶರಣೆ. ಪುಷ್ಪ ಗುರುಬಸವಪ್ಪ ಪೂಜ್ಯ ಗಂಗಾ ಮಾತಾಜಿ ಹಾಗೂ ಪೂಜ್ಯ ಮಾತಾಜಿಯವರು ಚಿತ್ರದಲ್ಲಿದ್ದಾರೆ.

ಪೂಜ್ಯ ಮಾತಾಜಿಯವರ ಪೀಠಾರೋಹಣ ಕಾರ್ಯಕ್ರಮ ಶರಣರಾದ ವೀರಣ್ಣ ಕೊರ್ಲಳ್ಳಿ, ಪುಷ್ಪಾ ಗುರುಬಸವಪ್ಪ, ಮಾಲೂತಾಯಿ ಆರತಿ ಬೆಳಗುತ್ತಿರುವುದು.



ಸಂಭ್ರಮ ಸಡಗರದಿಂದ ಕೂಡಿದ ಪೀಠಾರೋಹಣದಲ್ಲಿ ತುಂಬು ಉತ್ಸಾಹದಿಂಡ ಆರತಿ ಬೆಳಗುತ್ತಿರುವ ಶರಣ. ವೀರಣ್ಣ ಕೊರ್ಲಳ್ಳಿ, ಸಾಧಕ ಬಸವರಸ ಮತ್ತು ಇತರ ಶರಣ - ಶರಣೆಯರು.

Digitalized by e-Sahithya Documentation Forum
Sponsored by Sarayu Foundation Trust



ದಿ. 13-1-2004 ರಂದು ಪೂಜ್ಯ ಮಾತಾಜಿಯವರು
ಪೀಠಾರೋಹಣ ಪೂರ್ವದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಪೀಠಾರೋಹಣ ಸಂದರ್ಭ : ಭಕ್ತರ ಅಭಿಮಾನದ
ಮಹಾಪೂರದಲ್ಲಿ ಪೂಜ್ಯ ಮಾತಾಜಿಯವರು.

ದಿ. 13 ರಂದು ಪೀಠಾರೋಹಣ ಪೂರ್ವದಲ್ಲಿ ತಮಿಳುನಾಡಿನ ಕಾಟೇರಿ,
ಸಕಲಟ್ಟಿ ಶರಣ-ಶರಣೆಯರಿಂದ ಭಾವ ಪೂರ್ಣ ವಚನ ಗಾಯನ ಕಾರ್ಯಕ್ರಮ.



ದಿನಾಂಕ : 14-1-04 ರಂದು ಬಸವ ಧರ್ಮ ಸಂಸ್ಥಾಪನಾ ದಿನಾಚರಣೆಯಂದು ಗಣಲಿಂಗ ದರ್ಶನ
ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರು ಮತ್ತು ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ

Digitalized by e-Sahithya Documentation Forum
Sponsored by Sarayu Foundation Trust



ಶರಣ ಮೇಳ ಪ್ರಾರಂಭದಿನದಿಂದಲೂ ಪ್ರತಿದಿನ ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ನಡೆಸಿ ಕೊಟ್ಟ ಪೂಜ್ಯ ಬಸವಕುಮಾರ ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ ಮತ್ತು ಪೂಜ್ಯ ಚನ್ನಬಸವಾನಂದ ಸ್ವಾಮೀಜಿ.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಯಾದ ಶರಣರು.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಯಾದ ಶರಣೆಯರು.

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ ನೃತ್ಯ ರೂಪಕದ ಒಂದು ದೃಶ್ಯ.

Digitalized by e-Sahithya Documentation Forum
Sponsored by Sarayu Foundation Trust

ಎಲ್ಲರ ಪ್ರಶಂಸೆಗೆ ಒಳಗಾದ ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ ನೃತ್ಯ ರೂಪಕದಲ್ಲಿನ ದೃಶ್ಯ.

ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ನೃತ್ಯ ರೂಪಕದಲ್ಲಿ ಭಾಗಿಯಾದ
ಕಲಾವಿದರ ತಂಡ, ಪೂಜ್ಯ ಮಾತಾಜಿಯವರೊಂದಿಗೆ.



ದಿನಾಂಕ : 14-1-04 ರಂದು ಗಣಲಿಂಗ ಮುಂಭಾಗದಲ್ಲಿನ ಗುರು ಬಸವಣ್ಣನವರ
ದಿವ್ಯ ಮೂರ್ತಿ - ಪೂಜ್ಯ ಮಾತಾಜಿಯವರಿಂದ ಪೂಜೆಗೊಳ್ಳುತ್ತಿರುವುದು.



ದಿ. 15-1-2004 ರಂದು ನಡೆದ ಸಮಾರಂಭದಲ್ಲಿ ಗುರು ಬಸವಣ್ಣನವರ
ವಿಶೇಷ ಪೂಜೆಯನ್ನು ನೆರವೇರಿಸುತ್ತಿರುವ ಪೂಜ್ಯ ಶ್ರೀ ಗಂಗಾಮಾತಾಜಿಯವರು.
ಶರಣ. ವೀರಣ್ಣ ಕೊರ್ಲಹಳ್ಳಿ, ಶರಣೆ. ದೇವಿಕಾ ಬೆಣ್ಣೂರವರು ಜೊತೆಯಲ್ಲಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಶರಣ. ಸಂಗಣ್ಣ ಕರಡಿ, ರಾಜಕೀಯ ಧುರೀಣರು, ಗುರು ಬಸವಣ್ಣನವರ ಕ್ಯಾಲೆಂಡರ್ ಬಿಡುಗಡೆ ಮಾಡುತ್ತಿರುವುದು.



ಶರಣ ಮೇಳದಲ್ಲಿ ಶಿಸ್ತಿನಿಂದ ಪಾಲ್ಗೊಂಡ ಶರಣ-ಶರಣೆಯರು.



ಶರಣ ಮೇಳದಲ್ಲಿ ಅತ್ಯಂತ ಆಸಕ್ತಿಯಿಂದ ಪ್ರವಚನ ಆಲಿಸುತ್ತಿರುವ ಶರಣ-ಶರಣೆಯರು.

ಶರಣ ಮೇಳದಲ್ಲಿ ಅಪಾರ ಜನಸ್ತೋಮವಿದ್ದರೂ ಅಚ್ಚುಕಟ್ಟಾದ, ಶಿಸ್ತಿನ ಪ್ರಸಾದ ವ್ಯವಸ್ಥೆಯಿದ್ದು ಅದರ ಒಂದು ದೃಶ್ಯ.

Digitalized by e-Sahithya Documentation Forum
Sponsored by Sarayu Foundation Trust

ದಿ. 12-1-2004 ರಂದು ಸಂಜೆ ನಡೆದ ಚಿಂತನ ಗೋಷ್ಠಿಯಲ್ಲಿ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಎಂಬ ವಿಷಯ ಕುರಿತು ಮಾತನಾಡುತ್ತಿರುವ ವಕೀಲರಾದ ಶರಣೆ. ಜ್ಯೋತಿ ಅಶ್ವಿನ್‌ರವರು.

ಶರಣಮೇಳದಲ್ಲಿ ಭಾಗವಹಿಸಿರುವ ಅಪಾರ ಶರಣಸ್ತೋಮ.

ಪ್ರಸಾದಕ್ಕಾಗಿ ಶಿಸ್ತಿನಿಂದ ನಿಂತ ಶರಣರು.



ಶರಣರ ಭವ್ಯ ಮೂರ್ತಿಗಳ ನಡುವೆ ನೂತನವಾಗಿ ನಿರ್ಮಿಸಲಾಗಿರುವ ಕಾರಂಜಿಯನ್ನು ಪೂಜ್ಯ ಮಾತಾಜಿಯವರು ಉದ್ಘಾಟಿಸಿದರು.

Digitalized by e-Sahithya Documentation Forum
Sponsored by Sarayu Foundation Trust

ಅಂದ್ರಾಳು ರಾಷ್ಟ್ರೀಯ ಬಸವ ದಳದವರು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ
ಪೂಜ್ಯ ಮಾತಾಜಿ, ಶರಣೆ. ಶಾರದಮ್ಮ ಹಾಗೂ ಇತರರು.

ಬೆಂಗಳೂರಿನ ಮಾನಸ ಗಂಗೋತ್ರಿ, ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸುತ್ತಿರುವ
ಪೂಜ್ಯ ಮಾತಾಜಿಯವರು. ಶಾಲೆಯ ಸಂಸ್ಥಾಪಕರಾದ ಶರಣ. ಬಸವರಾಜ್‌ರವರೂ ಚಿತ್ರದಲ್ಲಿದ್ದಾರೆ.

ದಿ. 7-1-04 ರಂದು ಬಳ್ಳಾರಿ ರಾಷ್ಟ್ರೀಯ ಬಸವ ದಳದವರು ಆಯೋಜಿಸಿದ ಸಿದ್ಧರಾಮೇಶ್ವರರ ಸಂಸ್ಮರಣೆ
ಹಾಗೂ ಹುಣ್ಣಿಮೆ ಕಾರ್ಯಕ್ರಮಕ್ಕೆ ಆಗಮಿಸುತ್ತಿದ ಮಾತಾಜಿಯವರಿಗೆ ಶರಣ-ಶರಣೆಯರಿಂದ ಭವ್ಯ ಸ್ವಾಗತ.

ದಿ. 7-1-04 ರಂದು ಬಳ್ಳಾರಿಯಲ್ಲಿ ನಡೆದ ಕಾರ್ಯಕ್ರಮವನ್ನು ಬಸವ ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವ ಕನ್ನಡ ಸಾಹಿತ್ಯ
ಪರಿಷತ್ ಅಧ್ಯಕ್ಷರಾದ ಹಂಪನ ಗೌಡರು, ಪೂಜ್ಯ ಮಾತಾಜಿಯವರು ಹಾಗೂ ಇತರ ಶರಣ-ಶರಣೆಯರು ಚಿತ್ರದಲ್ಲಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust



ದಿ. 7-1-04 ಬಳ್ಳಾರಿ ರಾಷ್ಟ್ರೀಯ ಬಸವ ದಳದವರು ಆಯೋಜಿಸಿದ ಸಿದ್ಧರಾಮೇಶ್ವರರ ಸಂಸ್ಮರಣೆ ಹಾಗೂ ಹುಣ್ಣಿಮೆ ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರು ಉಪನ್ಯಾಸ ನೀಡುತ್ತಿರುವುದು.



ದಿ. 7-1-04 ರಂದು ಬಳ್ಳಾರಿಯಲ್ಲಿ ನಡೆದ ಸಿದ್ಧರಾಮೇಶ್ವರರ ಸಂಸ್ಮರಣೆ ಹಾಗೂ ಹುಣ್ಣಿಮೆ ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರು ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಶರಣರಾದ ವಿರೂಪಾಕ್ಷಗೌಡ, ಹಂಪನಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಹಾಗೂ ಮತ್ತಿತರ ಗಣ್ಯರನ್ನು ಕಾಣಬಹುದು.



ದಿ. 7-1-04 ರಂದು ಬಳ್ಳಾರಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣೆ. ಶಾರದಮ್ಮನವರಿಂದ ಹುಣ್ಣಿಮೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪೂಜ್ಯರಿಗೆ ಸನ್ಮಾನ.

ದಿ. 7-1-04 - ಮಾತಾಜಿಯವರ ಪೂರ್ವಾಶ್ರಮದ ಮಾತೃಶ್ರೀಯವರಿಗೆ ಮಾಲಾರ್ಪಣೆ ಮಾಡುತ್ತಿರುವ ರಾ.ಬ.ದಳ ಅಧ್ಯಕ್ಷರಾದ ಶರಣೆ. ಶಾರದ ತಾಯಿ.

Digitalized by e-Sahithya Documentation Forum
Sponsored by Sarayu Foundation Trust

ಸಿದ್ಧರಾಮೇಶ್ವರ ಹುಣ್ಣಿಮೆ ಕಾರ್ಯಕ್ರಮ - ಬಳ್ಳಾರಿ ರಾಷ್ಟ್ರೀಯ ಬಸವ ದಳದ ಭವ್ಯ ಸಭಾ ಮಂಟಪದಲ್ಲಿ.

ಶರಣ ಮೇಳ ಪ್ರಚಾರಾರ್ಥ ಬೀದರ್‌ಗೆ ಆಗಮಿಸಿದ ಪೂಜ್ಯ ಗಂಗಾಮಾತಾಜಿಯವರನ್ನು ಸ್ವಾಗತಿಸುತ್ತಿರುವ ಪೂಜ್ಯ ಶ್ರೀ ಮಾತೆ ನಿಶ್ಚಲಾಂಬ, ಶರಣೆ ಚಂದ್ರಮ್ಮ ಗಾದಗಿ ಮತ್ತು ಇತರ ಶರಣ-ಶರಣೆಯರು.

ಅಂದ್ರಾಳು ಗ್ರಾಮದಲ್ಲಿ ಶರಣ. ಶಿವಲಿಂಗಪ್ಪನವರು 2 ನಿವೇಶನಗಳನ್ನು ರಾ.ಬ.ದಳಕ್ಕೆ ಕೊಡುಗೆಯಾಗಿ ನೀಡಿದ್ದು ಅಲ್ಲಿ ಬಸವ ಮಂಟಪ ಕಟ್ಟಲು ಪೂಜ್ಯ ಮಾತಾಜಿಯವರು ಗುರು ಬಸವಣ್ಣನವರ ಪೂಜೆ ಮಾಡಿಸುವುದರ ಮೂಲಕ ಅನುವು ಮಾಡಿಕೊಡುತ್ತಿರುವುದು.



ದಿ.7-1-04 ರಂದು ಬಳ್ಳಾರಿ ರಾಷ್ಟ್ರೀಯ ಬಸವ ದಳದವರು ಆಯೋಜಿಸಿದ ಸಿದ್ಧರಾಮೇಶ್ವರರ ಸಂಸ್ಮರಣೆ ಹಾಗೂ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗುರು ಬಸವಣ್ಣನವರ ಮತ್ತು ಸಿದ್ಧರಾಮೇಶ್ವರರಿಗೆ ಪೂಜೆ ಸಲ್ಲಿಸುತ್ತಿರುವ ಪೂಜ್ಯ ಮಾತಾಜಿ.

Digitalized by e-Sahithya Documentation Forum
Sponsored by Sarayu Foundation Trust

ಬಳ್ಳಾರಿ ಸಮೀಪದ ಅಂದ್ರಾಳು ಗ್ರಾಮದಲ್ಲಿ ನಡೆಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಪೂಜ್ಯ ಮಾತಾಜಿಯವರಿಗೆ ಶರಣ ವೃಂದದಿಂದ ಭವ್ಯ ಸ್ವಾಗತ.



ಬಳ್ಳಾರಿ ಸಮೀಪದ ಅಂದ್ರಾಳು ಗ್ರಾಮದ ಶರಣ. ಶಿವಲಿಂಗಪ್ಪನವರು ರಾಷ್ಟ್ರೀಯ ಬಸವ ದಳಕ್ಕಾಗಿ 2 ನಿವೇಶನ ಕೊಟ್ಟಿದ್ದು, ಅದೇ ಜಾಗದಲ್ಲಿ ಪೂಜ್ಯ ಮಾತಾಜಿಯವರು ಕಾರ್ಯಕ್ರಮ ನೆರವೇರಿಸಿ ಕೊಟ್ಟರು.



ಕಾಯಕ ಕಂಪ್ಯೂಟರ್ ಎಜ್ಯುಕೇಷನ್ ಉದ್ಘಾಟನೆ ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರು. ಸಂಸ್ಥೆಯ ಮುಖ್ಯಸ್ಥರಾದ ಶರಣ ನೀಲಕಂಠ್ ಮತ್ತು ಇಂಡಿಯನ್ ಕ್ರೂಸಿಡರ್ ಕಂಪನಿ, ದೆಹಲಿ. ಇದರ ಮಾಲೀಕರಾದ ಶರಣ ಕಪಿಲ್ ಚಾವ್ಲಾರವರು ಚಿತ್ರದಲ್ಲಿದ್ದಾರೆ.

ಗದಗ್ ಜಿಲ್ಲೆಯ ರೋಣ ತಾಲ್ಲೂಕಿನ ಬೊಮ್ಮಸಾಗರದಲ್ಲಿ ನಡೆದ 'ಪ್ರಾಣ ಬಲಿ' ತಡೆ ಆಂದೋಲನದ ಯಶಸ್ಸಿನ ನಂತರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿರುವ ಪೂಜ್ಯರಾದ ದಯಾನಂದ ಸ್ವಾಮೀಜಿ, ಜಗದ್ಗುರು ಮಾತೆ ಗಂಗಾದೇವಿಯವರು. ಜೊತೆಯಲ್ಲಿ ರೋಣ ತಾಲ್ಲೂಕಿನ ತಹಸಿಲ್ದಾರರಾದ ಸಿ.ಎಂ. ಹಿರೇಮಠ್ ಹಾಗೂ ಹುಬ್ಬಳ್ಳಿಯ ಗೋಶಾಲೆ ಅಧ್ಯಕ್ಷರಾದ ಮೇಘರಾಜ್ ಚಿತ್ರದಲ್ಲಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಗದಗ್ ಜಿಲ್ಲೆಯ ರೋಣ ತಾಲ್ಲೋಕಿನ ಬೊಮ್ಮಸಾಗರದಲ್ಲಿ 'ಪ್ರಾಣಿ ಬಲಿ' ತಡೆಗಾಗಿ ನಿಯೋಜಿಸಲಾಗಿದ್ದ ಪೋಲೀಸ್ ಪಡೆಗಳ ಒಂದು ದೃಶ್ಯ.

ಗದಗ್ ಜಿಲ್ಲೆಯ ರೋಣ ತಾಲ್ಲೋಕಿನ ಬೊಮ್ಮಸಾಗರದಲ್ಲಿ ನಡೆದ 'ಪ್ರಾಣಿ ಬಲಿ' ತಡೆ ಆಂದೋಲನದ ಯಶಸ್ಸಿಗೆ ಕನ್ನಡಿ ಹಿಡಿದಂತೆ ಗ್ರಾಮದೇವಿಯ ಬಲಿಗಾಗಿ ಕರೆತಂದಿದ್ದ ಕೋಣಗಳು ಮತ್ತೆ ತಮ್ಮ ಗ್ರಾಮಕ್ಕೆ ಮರಳುತ್ತಿರುವುದು.

ಕಾಡುತ್ತಿರುವ ಲಿಂಗದೇವ !

- ಮಾತಾಜಿ

ದೇವನೊಳ್ಳಿದನೆಂದು ಮುಯ್ಯಾನಲು ಬೇಡ
ತರಕಟ ಕಾಡುವನೊಳ್ಳಿದನೆ ? ಆಳಿಸುವ ನಗಿಸುವನೊಳ್ಳಿದನೆ ?
ಬೆಚ್ಚದೆ ಬೆದರದೆ ತೊತ್ತುತನವ ಮಾಡಲು
ತನ್ನನೀವನು ಲಿಂಗದೇವ !   ಬ.ವ.ದೀ - 150

ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ
ಲಿಂಗದೇವಯ್ಯನೆನ್ನ ಕಾಡಿಹನಯ್ಯ!   ಬ.ವ.ದೀ - 61

ಅಖಂಡ ವಿಶ್ವಾಸಿ, ಸೇಶ್ವರವಾದಿ ಬಸವಣ್ಣನವರು (ಪ್ರೀತಿಯ) ಮುನಿಸಿನಿಂದ ದೇವರ ಬಗ್ಗೆ ದೂರುಕೊಡುವ ಮಾತುಗಳು ಅನೇಕ. ಉಭಯತರ ಪ್ರಣಯ ಕಲಹ ಸಾಧಕರ ಮನಸ್ಸಿಗೆ ಮುದನೀಡುತ್ತದೆ. ಹೀಗೊಂದು ಎಚ್ಚರಿಕೆ ನೀಡುತ್ತಾರೆ : "ದೇವನು ಒಳ್ಳೆಯವನು ಎಂದು ಪ್ರೀತಿಸಲು ಹೋಗಬೇಡ. ತನಗೆ ಶರಣು ಬಂದವರನ್ನು ಕರಕಟ ಕಾಡಿಸುತ್ತಾನೆ. ಒಮ್ಮೆ ಅಳಿಸುತ್ತಾನೆ; ಮತ್ತೊಮ್ಮೆ ನಗಿಸುತ್ತಾನೆ " ಎನ್ನುತ್ತಾರೆ. ಆದರೆ ಮರುಕ್ಷಣವೇ ಹೇಳುತ್ತಾರೆ, "ಮುನಿಸಿನ ಭರದಲ್ಲಿ ಆಡಿದ ನನ್ನ ಮಾತಿನಿಂದ ತಪ್ಪು ತಿಳಿಯಬೇಡಿರಿ. ದೇವನು ಕರುಣಾಮಯಿ; ಬೆಚ್ಚದೆ, ಬೆದರದೆ ನಿಮ್ಮ ಸಾಧನೆಯನ್ನು, ಸೇವೆಯನ್ನು ಮುಂದುವರಿಸಿದರೆ ಕಡೆಗೆ ತನ್ನನ್ನೇ ತಾನು ಕೊಟ್ಟುಕೊಳ್ಳುವನು".

ಇಂಥದೇ ಇನ್ನೊಂದು ಮುನಿಸಿನ ಸಂದರ್ಭದಲ್ಲಿ ಶರಣ ಗಣಂಗಳಲ್ಲಿ ದೇವರ ಕಾಠಿಣ್ಯದ ಬಗ್ಗೆ ದೂರು ಕೊಡುತ್ತಾರೆ. ಬಸವಣ್ಣನವರು "ದೇವರು ನನ್ನನ್ನು ಕಾಡುತ್ತಿದ್ದಾನೆ" ಎಂದು.

"ಮಳೆ ಬಿಟ್ಟರೂ ಮರದ ಹನಿ ಬಿಡದು" ಎಂಬಂತೆ ಲಿಂಗದೇವನ ಸುದ್ದಿ ಇನ್ನೂ ಸುತ್ತುತ್ತಲೇ ಇದೆ. ಧರ್ಮಪಿತ ಬಸವಣ್ಣನವರ ವಚನಗಳಿಂದ ಮತ್ತು ನಮ್ಮ ಸೈದ್ಧಾಂತಿಕ ನಿಲುವಿನಿಂದ ಲಿಂಗದೇವನನ್ನು ಬೇರ್ಪಡಿಸಲು ಅರ್ಥಾತ್ ವಿಚ್ಛೇದನ ಕೊಡಿಸಲು ಹಲವಾರು ಹಿತೈಷಿಗಳು (?) ನ್ಯಾಯಾಲಯದ ಮೂಲಕ ಮತ್ತು ಮಾತಿಗೆ ಆಹ್ವಾನಿಸುವ ಮೂಲಕ ಪ್ರಯತ್ನಿಸುತ್ತಿದ್ದಾರೆ.

ತತ್ತ್ವನಿಷ್ಠೆ ಮತ್ತು ಪ್ರತಿಷ್ಠೆ

ಕರುಣೆ ಬಂದರೆ ಕಾಯೊ । ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ। ಮಾ
ಗುರುವೆ ಕಡೆತನಕ ಕಾಯೋ ಅಭಿಮಾನ।

ಎಂಥ ಅದ್ಭುತವಾದ ಅಮರ ನುಡಿಗಳಿವು. ಹಾಡಿದಾಕೆ/ತ ಓರ್ವ ಗ್ರಾಮೀಣ ಸಾಮಾನ್ಯ ಮಹಿಳೆ/ಪುರುಷ. ಈ 3 ವಾಕ್ಯಗಳು ಸಾರುವ ತತ್ತ್ವ, ಸಂದೇಶ ನಿಸ್ಸೀಮ. ಇದರಲ್ಲಿ ಹುದುಗಿರುವ ಅಂಶಗಳು ಹಲವು:

1. ಬಸವಣ್ಣನವರು ಮಹಾಗುರುವು
2. ಅವರು ಕರುಣಾಮೂರ್ತಿ, ಶರಣಾಗತ ರಕ್ಷಕರು.

Digitalized by e-Sahithya Documentation Forum
Sponsored by Sarayu Foundation Trust

3. ಸ್ವಾಭಿಮಾನಿಯಾದ ಬಸವಣ್ಣನವರು ತಮ್ಮ ಭಕ್ತರು, ಅನುಯಾಯಿಗಳು ಸ್ವಾಭಿಮಾನಿಗಳಾಗಿರಬೇಕೆಂದು ಬಯಸುವರು. ಛಲವಂತಿಕೆ, ತತ್ತ್ವನಿಷ್ಠೆ ಇಲ್ಲದ ಬದುಕನ್ನು, ಬದುಕುವ ಬಗೆಯನ್ನು ಬಸವಣ್ಣನವರು ಇಷ್ಟಪಡುವುದಿಲ್ಲ. ''ಕುಲಕೆಟ್ಟರೂ ಕೆಡಬಹುದಲ್ಲದೆ ಛಲ ಕೆಡಬಾರದು'' ಎಂಬುದು ಶರಣರಾಡಿದ ಮಾತು.

ಬಸವ ತತ್ತ್ವದ ಸಾರ ತಿಳಿದ, ಬಸವ ಮಾರ್ಗದ ವೈಶಿಷ್ಟ್ಯ ಅರಿತ ಶರಣ ಜೀವಿ ಮಹಿಳೆ (ಅಥವಾ ಪುರುಷ) ಧರ್ಮಪಿತ ಬಸವಣ್ಣನವರಲ್ಲಿ ಬೇಡುತ್ತಾಳೆ, ''ನಿನಗೆ ಕರುಣ ಬಂದರೆ ನನ್ನನ್ನು ರಕ್ಷಿಸು. ಇಲ್ಲದಿದ್ದರೆ ಮರಣವನ್ನು ಕೊಡು. ಆದರೆ ಜೀವನದ ಕಡೆಯ ಕ್ಷಣದವರೆಗೂ ಅಭಿಮಾನಿಯಾಗಿ ಬದುಕುವ ಛಲವನ್ನು ಕೊಡು''.

ತತ್ತ್ವರಹಿತ, ಸ್ವಾಭಿಮಾನ ಶೂನ್ಯವಾದ ಅಂಜುಬುರುಕ ಜೀವನಕ್ಕಿಂತ ತತ್ತ್ವನಿಷ್ಠವಾದ ಛಲವಂತಿಕೆಯ ಮರಣವೇ ಶರಣನಿಗೆ ಪ್ರಿಯ. ಈ ಸತ್ಯಕ್ಕೆ ಸಾಕ್ಷಿಯಾಗಿದ್ದಾರೆ ಸೋಕ್ರತೀಸ, ಏಸು, ಗೆಲಿಲಿಯೋ, ಹರಳಯ್ಯ-ಮಧುವಯ್ಯ ಮುಂತಾದ ಹುತಾತ್ಮರುಗಳು.

ತತ್ತ್ವನಿಷ್ಠ ಸ್ವಾಭಿಮಾನ ಮತ್ತು ಪ್ರತಿಷ್ಠೆಗಳ ಮಧ್ಯೆ ಕೂದಲೆಳೆಯ ಅಂತರವಿದೆ. ಬಹಳ ತೆಳುವಾದ ಪರದೆಯಂತೆ ಅಹಂಕಾರವು ಮಧ್ಯೆ ನಿಂತಿರುತ್ತದೆ. ಕೆಲವೊಮ್ಮೆ, ಸ್ತಬ್ಧವಾಗಿ ನಿಂತಿರುವ ಶುಭ್ರ ವಿಶಾಲ ಸರೋವರದೊಳಗೆ ಗಿರಿ, ಮುಗಿಲುಗಳ ಪ್ರತಿಬಿಂಬ ಮೂಡಿರುತ್ತದೆ. ಆಗ ನಾವು ಫೋಟೋ ತೆಗೆದರೆ ಎರಡರ ನಡುವಿನ ಅಂತರವೇ ಕಾಣಬರದು. ನಿಜವು ಯಾವುದು ? ಪ್ರತಿಬಿಂಬ ಯಾವುದು? ಎಂಬ ಸಂದೇಹ ಏಳುತ್ತದೆ. ಹಾಗೆಯೇ ತತ್ತ್ವನಿಷ್ಠೆ ಮತ್ತು ಪ್ರತಿಷ್ಠೆ ಬಗ್ಗೆ ಸಹ; ಎರಡರ ನಡುವಿನ ವ್ಯತ್ಯಾಸವೇ ಬಹಳ ಜನರಿಗೆ ತಿಳಿಯದು. ಛಲವಂತಿಕೆಯು ತತ್ತ್ವನಿಷ್ಠೆಯ ಆಧಾರದ ಮೇಲಿದ್ದರೆ ಹಟಮಾರಿತನವು ಪ್ರತಿಷ್ಠೆ, ಅಹಂಕಾರಗಳ ಮೇಲೆ ನಿಂತಿರುತ್ತದೆ. ''ಲಿಂಗದೇವ'' ವಿಷಯದಲ್ಲಿ ಕೆಲವರು ಹೇಳುತ್ತಾರೆ, ''ನೀವು ವಚನಾಂಕಿತದ ವಿಷಯವನ್ನು ಪ್ರತಿಷ್ಠೆಯ ಸಂಗತಿಯನ್ನಾಗಿ ಮಾಡಿಕೊಳ್ಳದೆ ಲಿಂಗದೇವ ಪದವನ್ನು ವಾಪಸ್ಸು ತೆಗೆದುಕೊಂಡು ಬಿಡಿರಿ''.

''ಲಿಂಗದೇವ ಅಂದರೂ ಅಷ್ಟೇ ಕೂಡಲ ಸಂಗಮದೇವಾ ಅಂದರೂ ಅಷ್ಟೇ. ವಚನಾಂಕಿತವನ್ನು ವಾಪಸ್ಸು ತೆಗೆದುಕೊಂಡರೆ ಅವಮಾನವಾಗುತ್ತದೆ ಎಂದು ಭಾವಿಸಬೇಡಿ. ಉನ್ನತ ನ್ಯಾಯಾಲಯದ ತೀರ್ಪಿಗೆ ತಲೆಬಾಗಿ ವಾಪಸ್ಸು ಪಡೆಯುತ್ತೇನೆ'' ಎಂದು ಹೇಳಿಬಿಡಿರಿ.

ಈ ಸಲಹೆಗಳನ್ನೆಲ್ಲ ಕೊಡುವವರು ಗಣ್ಯಾತಿಗಣ್ಯರು. ಆದ್ದರಿಂದ ಯಾರ ಹೆಸರನ್ನು ನಾನು ಹೇಳುವುದಿಲ್ಲ. ಆದರೆ ವೀರವಿರಾಗಿಣಿ ಅಕ್ಕಮಹಾದೇವಿ ಹೇಳುತ್ತಾಳೆ:

ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ
ನಿನ್ನನರಿಯದ ಸ್ವರ್ಗವೇ ನರಕ ಕಂಡಯ್ಯ
ನೀನೊಲ್ಲದ ಸುಖವೇ ದುಃಖ ಕಂಡಯ್ಯ,
ನೀನೊಲಿದ ದುಃಖವೇ ಪರಮ ಸುಖ ಕಂಡಯ್ಯ
ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ನೀ ಕಟ್ಟಿ ಕೆಡಹಿದ ಬಂಧವೇ ನಿರ್ಬಂಧವೆಂದಿಪ್ಪೆನು!

ಸೃಷ್ಟಿಕರ್ತ ಲಿಂಗದೇವನ ಜ್ಞಾನವನ್ನು ಹೊಂದಿ ನರಕದಲ್ಲಿದ್ದರೂ ಅದು ಮೋಕ್ಷದ ಆನಂದವನ್ನು ನೀಡುತ್ತದೆ. ಅವನ ನಿಜ ಸ್ವರೂಪದ ಜ್ಞಾನವಿಲ್ಲದೆ ಸ್ವರ್ಗದ ಸುಖದಲ್ಲಿದ್ದರೂ ಜ್ಞಾನಿಗೆ ಅದು ನರಕದ ಅನುಭವ ನೀಡುತ್ತದೆ. ದೇವನ ಒಲುಮೆಗಾಗಿ ಶರಣರು ಅಪಾರವಾದ ಕಷ್ಟಕೋಟಲೆ ಅನುಭವಿಸುತ್ತಾರೆ. ದೇವರ ಒಲುಮೆಯಾದ ನಂತರವೂ ಮಾನವರಿಂದ ಕಿರುಕುಳ ಅನುಭವಿಸುತ್ತಾರೆ. ಆದರೆ ಅವರ ಮನಸ್ಸು ಘನದ ನೆನಹಿನಲ್ಲಿ ಮೀಯುತ್ತ ಪರಮಾನಂದದಲ್ಲಿ ತೇಲಾಡುತ್ತಿರುತ್ತದೆ. ''ದೇವರನ್ನು ನೆನೆಯಬಾರದು, ಶರಣರ ಸತ್ಸಂಗದಲ್ಲಿ ಸೇರಬಾರದು'' ಎಂದು ನಿರ್ಬಂಧ ವಿಧಿಸಿ ಸಾಧಕ ಜೀವಿಗಳನ್ನು ಅನೇಕ ಸುಖಗಳ ಮಧ್ಯದಲ್ಲಿ ಇಟ್ಟರೆ ಅವರು ಅಲ್ಲಿ ನರಕದ ಯಾತನೆಯನ್ನು ಅನುಭವಿಸುತ್ತಾರೆ. ಅಕ್ಕಮಹಾದೇವಿ ಹೇಳುವಂತೆ, ''ದೇವರು ಕಟ್ಟಿ ಹಾಕಿದ ಅಧ್ಯಾತ್ಮಿಕ ಬಂಧನವನ್ನೇ ಪಾರಮಾರ್ಥಿಕರು ಪರಮ ಸ್ವಾತಂತ್ರ್ಯವೆಂದು ಭಾವಿಸುತ್ತಾರೆ''.

ಮೂವರು ಬಸವಾಭಿಮಾನಿ ಗಣ್ಯರು ನನ್ನ ಭೇಟಿಗೆ ಬರಬೇಕಾಗಿದೆ ಎಂದು ವಿಶ್ವಾಸದಿಂದ ಫೋನ್ ಮಾಡಿದರು. ದಿನಾಂಕವನ್ನು ಮುಂದೂಡಲು ಅವಕಾಶವಿರದಂತೆ ಅಂದೇ ಬರುವುದಾಗಿ ಸಮಯ ಕೇಳಿದರು. ತಾಪತ್ರಯಕ್ಕಿಟ್ಟುಕೊಂಡಿತು. ಉಪಾಯವೊಂದು ಹೊಳೆದು ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷರಾದ ಶರಣ. ಪುಟ್ಟರುದ್ರ ಅವರಿಗೆ ಹೇಳಿದೆ, ''ಹೀಗೆ ಕೆಲವರು ಸಮಯ ಕೇಳುತ್ತಿದ್ದಾರೆ. ಅವರು ಬರುವ ಉದ್ದೇಶ ನಮಗೆ ತಿಳಿದಿದೆ ಮತ್ತು ನಾವು ಅವರಿಗೆ ಕೊಡುವ ಉತ್ತರವೂ ನಮಗೆ ತಿಳಿದಿದೆ. ಅವರು ನನ್ನವರೆಗೆ ಬಂದು ಅವರ ಮಾತಿಗೆ ಒಪ್ಪದ ಉತ್ತರ ತಿಳಿದು, ''ನಾನು ಹಟಮಾರಿ'' ಎಂದು ಇನ್ನೊಂದು ಬಾರಿ ದೃಢಪಡಿಸಿಕೊಳ್ಳುವ ಅಗತ್ಯವಿಲ್ಲ, ಅವರು ಇದ್ದಲ್ಲಿಗೆ ನೀವೇ ಹೋಗಿ ''ನನ್ನ ನಿರ್ಧಾರ ತಿಳಿಸಿ ಬನ್ನಿರಿ'' ಎಂದೆ. ಶರಣ. ಪುಟ್ಟರುದ್ರಪ್ಪನವರಿಗೆ ನಮ್ಮ ವಿಚಾರಧಾರೆ ಪೂರ್ಣವಾಗಿ ತಿಳಿದಿದೆ. ಹೋಗಿ ಮಾತನಾಡಿಕೊಂಡು ಬಂದರು. ಆ ಗಣ್ಯರ ವಾದ ಇಲ್ಲಿಗೆ ಬಂದು ನಿಂತಿತು.

''ಸೈದ್ಧಾಂತಿಕವಾಗಿ ಲಿಂಗದೇವ ಪದ ಸರಿ ಇರಬಹುದು. ಲಿಂಗಾಯತ ಧರ್ಮದ ದೇವರ ಪರಿಕಲ್ಪನೆಯನ್ನು ಸೂಕ್ತವಾಗಿ ಬಿಂಬಿಸುತ್ತಿರಬಹುದು. ಆದರೆ ಸಮಾಜದ ಹಿತದೃಷ್ಟಿಯಿಂದ, ಸಂಘಟನೆಯ ದೃಷ್ಟಿಯಿಂದ ಲಿಂಗದೇವ ಪದವನ್ನು ವಾಪಸ್ಸು ಪಡೆಯಲಿ''.

ನನಗೆ ಈ ವಾದ ತುಂಬಾ ತಮಾಷೆಯದು ಎನಿಸುತ್ತಿದೆ.

1. ಲಿಂಗದೇವ ವಚನಾಂಕಿತದಿಂದ ಲಿಂಗಾಯತ ಸಮಾಜ ವಿಘಟನೆಯಾಗಿದೆಯೆ? 1996ಕ್ಕೆ ಮೊದಲು ಬಹಳ ಸುಸಂಘಟಿತವಾಗಿತ್ತೆ?

2. ಈ ಪದವನ್ನು ನಾನು ಕೈಬಿಟ್ಟರೆ ಏನಾದರೂ ಜಾದೂ ನಡೆದು ಈ ಸಮಾಜವು ಒಂದಾಗಿ ಬಿಡುವುದೆ ?

3. ಅತ್ಯಂತ ಬಲಿಷ್ಠರು, ಧನಾಢ್ಯರು ಆಗಿರುವ ಮಠಾಧೀಶರು ಮತ್ತು ಅವರ ಬೆಂಗಾವಲಾಗಿರುವ ಗಣ್ಯ ರಾಜಕೀಯ ಮುಖಂಡರು, ಸಮಾಜದ ಮುಖಂಡರು ಒಟ್ಟುಗೂಡಿ ಮಾಡಲಾರದ ಸಂಘಟನಾ ಕಾರ್ಯ ಅಲ್ಪರಾದ, ಧನ ಬಲ ಮತ್ತು ರಾಜಕೀಯ ಬಲ ಇಲ್ಲದ ನಮ್ಮಿಂದ ಸಾಧ್ಯವೆ? ಅಂದಾಗ ಏಕೆ ಈ ಒತ್ತಾಯ?!

Digitalized by e-Sahithya Documentation Forum
Sponsored by Sarayu Foundation Trust

4. ಒಂದು ವೇಳೆ ನಮ್ಮಿಂದ ಸಂಘಟನಾ ಕಾರ್ಯ ಆಗುತ್ತಿದೆ; ಈ ಕರ್ತೃತ್ವ ಶಕ್ತಿಯನ್ನು
ಸದುಪಯೋಗ ಮಾಡಿಕೊಂಡು ಇಡೀ ಸಮಾಜವನ್ನು ಕಟ್ಟಬೇಕೆಂಬ ಕಳಕಳಿ ಈ ಕೆಲವರಲ್ಲಿ
ಮಾತುಕತೆಗೆ ನಮ್ಮನ್ನು ಆಹ್ವಾನಿಸುತ್ತಿರುವವರಲ್ಲಿ ಇದ್ದುದೇ ಆದರೆ ಅವರು ಒಂದು ಸಂಗತಿಯನ್ನು
ಅರಿಯಬೇಕು; ಅದೆಂದರೆ ನಾವು ಕೆಲವು ಸೂತ್ರಗಳನ್ನು ಉದಾ: ಷಟ್‌ಸೂತ್ರ, ಷಟ್ ಸೌಂಜ್ಞೆಗಳನ್ನು
ಮಾಡಿರುವುದು, ಇಸ್ಲಾಂದಲ್ಲಿ ಅಲ್ಲಹ ಮತ್ತು ಮೊಹಮ್ಮದರನ್ನು ಗೌರವಿಸಿ ಸಮಾಜ ಕಟ್ಟದಂತೆ ನಾವು
ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರನ್ನು ಕೇಂದ್ರ ಶಕ್ತಿಯನ್ನಾಗಿ ಇಟ್ಟುಕೊಂಡಿರುವುದೇ
ಕಾರಣ. ಅಂದಾಗ ಈ ತತ್ತ್ವಗಳನ್ನು ಬಿಟ್ಟು ಸಂಘಟನೆಗೆ ಯತ್ನಿಸುವುದು ಆತ್ಮವಿರಹಿತ ಶರೀರಕ್ಕೆ
ಪೆಟ್ರೋಲ್ ಬಂಕಿನಲ್ಲಿ ಹೋಗಿ ಗಾಳಿ ತುಂಬಿದಂತೆ ನಿರರ್ಥಕ ಪ್ರಯತ್ನ. ನಾವದನ್ನು ಮಾಡುವವರಲ್ಲ.
ಹಾಗೆ ಮಾಡುವ ಸಾಮರ್ಥ್ಯ ವೀರಶೈವ ಮಹಾಸಭೆ ಮತ್ತು ಬಸವ ಸಮಿತಿಗೆ ಇದ್ದರೆ ಅವರ ಪ್ರಯತ್ನಕ್ಕೆ
ನಾವು ಶುಭಹಾರೈಸುತ್ತೇವೆ.

ಕೂಡಲ ಸಂಗಮದೇವ ಅಂದರೂ ಅಷ್ಟೇ ಲಿಂಗದೇವ ಅಂದರೂ ಅಷ್ಟೇ ಎನ್ನುವವರ
ಮನೋಭಾವ ಇಂದಿರಾ ಅಂದರೂ ಅಷ್ಟೇ ಇಂಡಿಯಾ ಎಂದರೂ ಅಷ್ಟೇ ಎಂಬಂತಿದೆ. ಮತ್ತೆ
ಕೆಲವರ ಮಾತುಗಳು ಇನ್ನೊಂದು ಬಗೆಯ ಅಜ್ಞಾನದಿಂದ ಕೂಡಿವೆ. ''ಸಮಾಜದ ಹಿತದೃಷ್ಟಿಯಿಂದ
ನಿಮ್ಮ ಹಟಮಾರಿತನ ಬಿಡಿರಿ'' ಎನ್ನುತ್ತಾರೆ.

''ಸಂಘಟನೆಯು ನಿಮ್ಮಿಂದ ಬಹಳ ಚೆನ್ನಾಗಿ ಆಗುತ್ತಿತ್ತು. ನಿಮ್ಮ ಸಂಘಟನಾ ಸಾಮರ್ಥ್ಯ
ಬೇರಾರಿಗೂ ಇಲ್ಲ. ಲಿಂಗದೇವ ವಚನಾಂಕಿತದಿಂದ ನಿಮ್ಮ ಪ್ರಗತಿಗೆ ಹಿನ್ನಡೆಯಾಯಿತೆಂದು ಅನೇಕರ
ಅನಿಸಿಕೆ. ನಿಮ್ಮ ರಾಷ್ಟ್ರೀಯ ಬಸವ ದಳ ಸಂಘಟನೆ ಇದರಿಂದ ಒಡೆಯಿತು''. ಹೀಗೆ ನಮಗಿಂತಲೂ
ಜಾಸ್ತಿ ಇಂಥ ಜನರು ಬಹಳ ವಿಷಾದ ವ್ಯಕ್ತಪಡಿಸುವಾಗ ಅವರ (ಅನುಕಂಪದ) ಬಗ್ಗೆ ನನಗೆ ಅಯ್ಯೋ
ಎನಿಸುತ್ತದೆ. ಆಗ ನನಗೆ ನಾನೇ ಬರೆದ ತರಂಗಿಣಿಯ ವಾಕ್ಯಗಳು ನೆನಪಿಗೆ ಬರುತ್ತವೆ.

''ಅಯ್ಯೋ ಲಿಂಗಮ್ಮ; ನಿನ್ನ ಮಗಳಿಗೆ ಹುಚ್ಚು ಹಿಡಿದಿದೆಯಂತೆ !''

''ಯಾರು ಹೇಳಿದರಮ್ಮ? ನಮ್ಮ ಮಹಾದೇವಿ ಚೆನ್ನಾಗಿಯೇ ಇದಾಳಲ್ಲ''.

''ಪಾಪ, ಅದಕ್ಕೇ ತಾಯಿ ಹೊಟ್ಟೆ ಎನ್ನುವುದು. ಮತ್ತೆ ದೇವರನ್ನೇ ಗಂಡ ಎನ್ನುವಳಂತೆ''.

ಸಂಘಟನೆ ಒಡೆದಿದ್ದರೆ, ನಮ್ಮ ಕೆಲಸಕ್ಕೆ ಹಿನ್ನಡೆ ಆಗಿದ್ದರೆ ಅದಕ್ಕೆ ವ್ಯಥೆ ಪಡಬೇಕಾದವರು
ನಾವು ಮತ್ತು ನಮ್ಮ ಅಭಿಮಾನಿ ಶರಣರು. ಅದು ಬಿಟ್ಟು ನಮಗೆ ಏನೂ ಕೊಡದವರು, ನಮ್ಮಿಂದ
ಏನೂ ಪಡೆಯದವರು ತೋರಿಸುವ ಅನುಕಂಪ ನೋಡಿದರೆ ನಗು ಬರುತ್ತದೆ. ''ನಮ್ಮ ಕಾರ್ಯದಲ್ಲಿ
ಹಿನ್ನಡೆಯಾಗಿದೆ ಎಂದು ಹೇಗೆ ಹೇಳುವಿರಿ ? 1996 ರಲ್ಲಿ ವಚನಾಂಕಿತದಲ್ಲಿ ಬದಲಾವಣೆಯಾಯಿತು.
ಆನಂತರ ಪ್ರವಚನಗಳು ಆಗುತ್ತಲೇ ಇವೆ. ರಾಷ್ಟ್ರೀಯ ಬಸವ ದಳಗಳು ರೂಪುಗೊಳ್ಳುತ್ತಿವೆ. ಶರಣ
ಮೇಳವು ವರ್ಷದಿಂದ ವರ್ಷಕ್ಕೆ ಹೆಚ್ಚಿನ ಜನರನ್ನು ಆಕರ್ಷಿಸುತ್ತಿದೆ. ಕಾಣಿಕೆಯ ಪ್ರಮಾಣ
ಹೆಚ್ಚಾಗುತ್ತಿದೆ. ಬಸವ ಕಲ್ಯಾಣದಲ್ಲಿ ಭೂಮಿ ಖರೀದಿಸಿ, ಕೆಲಸ ಮಾಡುತ್ತಿದ್ದೇವೆ. ಅಂದಾಗ ಯಾವ
ದೃಷ್ಟಿಯಿಂದ ಹಿನ್ನಡೆ ?'' ಎಂದು ನೇರವಾಗಿ ಪ್ರಶ್ನಿಸಿದಾಗ ಎದುರಿನವರು ನಿರುತ್ತರರಾಗುವರು.

''ನಿಮ್ಮ ಸಂಘಟನೆಯಲ್ಲಿದ್ದ ಕೆಲವರು ಒಡೆದು ಹೋದರಲ್ಲ?!''

''ಹೋದದ್ದಕ್ಕಿಂತ ಬಂದು ಸೇರಿದವರ ಸಂಖ್ಯೆ ಹೆಚ್ಚು. ಮಾನವ ದೌರ್ಬಲ್ಯದಿಂದ
ಭಿನ್ನಾಭಿಪ್ರಾಯಗಳು ಬರುತ್ತವೆ. ಅಂಥ ಭಿನ್ನಮತೀಯರು ಹೊರಹೋಗಲಿಕ್ಕೆ 'ಲಿಂಗದೇವ'ನಿಂದ
ಬಹಳ ಸಹಾಯವಾಯಿತು. ಅವರುಗಳು ಹೋಗುವವರೇ ಇದ್ದರು. ಕಾರಣ ಕೇಳಿದರೆ ಕಷ್ಟವಾಗಿ
ಅವರು ಏನೇನೋ ಸುಳ್ಳು ಸೃಷ್ಟಿ ಮಾಡಬೇಕಾಗುತ್ತಿತ್ತು. ಈಗ ಒಂದೇ ವಾಕ್ಯದಲ್ಲಿ ಹೇಳಲು ಸಾಧ್ಯ,
''ಮಾತಾಜಿ ಲಿಂಗದೇವ ಮಾಡಿದ್ದರಿಂದ ನಾವು ಹೊರಬಂದೆವು''. ಹೀಗೆ ಲಿಂಗದೇವನು ಸೆಪ್ಟಿಕ್
ಆಗದಂತೆ ಶಸ್ತ್ರಚಿಕಿತ್ಸೆ ಮಾಡಿದ.

ಈಗ ಎರಡು ತಿಂಗಳಿಂದ ಕೆಲವು ಜನರು ಬೆಂಬಿಡದೆ ಮಾತನಾಡಿಸುತ್ತಿದ್ದಾರೆ. ಕೆಲವರು
ಸ್ವಾಮಿಗಳು ಮುಖ್ಯವಾಗಿ ವಿರಕ್ತ ಮಠಾಧೀಶರು ನಮ್ಮ ಸಹಕಾರ ಬಯಸುತ್ತಿದ್ದಾರೆಂದು, ಅವರು
ನಾವು ಮಾಡುವ ಕಾರ್ಯಗಳ ಬಗ್ಗೆ ಅಭಿಮಾನ ಹೊಂದಿದ್ದಾರಂತೆ. ನಮ್ಮ ನೇತೃತ್ವದಲ್ಲಿ ಸಾಗಿ
ಸಂಘಟನೆ ಮಾಡಲು ಸಿದ್ಧರಿದ್ದಾರಂತೆ. ಆದರೆ ನಾನು ಲಿಂಗದೇವ ವಚನಾಂಕಿತವನ್ನು ವಾಪಸ್ಸು
ಪಡೆಯಬೇಕಂತೆ!''

ಇದೊಳ್ಳೆ ವಿಲಕ್ಷಣ ಕರಾರು. ನಾವೇನು 'ನೀವು ಸಹಕಾರ ನೀಡಿರಿ' ಎಂದು
ಯಾರನ್ನೂ ಗೋಗರೆಯುತ್ತಿಲ್ಲ. ನಮ್ಮ ಕೈಲಾದಷ್ಟು ಕೆಲಸ ನಾವು ಮಾಡಿದರಾಯ್ತು ಎಂದು ನಿರ್ಧರಿಸಿ,
ಸಾಗುತ್ತಿದ್ದೇವೆ. ತಾವಾಗಿಯೇ ಕೇಳಲು ಮುಂದೆ ಬಂದಿದ್ದಾಗ ಈ ಬಗೆಯ ಷರತ್ತು ಏಕೆ ? ಈ ಬಗ್ಗೆ
ಬೆಂಗಳೂರಿನ ಬಸವ ಮಂಟಪದಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಒಂದು ದಿನ ಮತ್ತು ಶರಣ
ಮೇಳದ ಚಿಂತನಗೋಷ್ಠಿ ಸಭೆಯಲ್ಲಿ ವಿಷಯವನ್ನು ಚರ್ಚೆಗೆ ಇಡಲಾಯಿತು. ಬಹುಪಾಲು
ಶರಣರು ಒಕ್ಕೊರಲಿನಿಂದ ಹೇಳಿದ್ದು ಎಂದರೆ,

1. 'ಲಿಂಗದೇವ' ತತ್ತ್ವವನ್ನು ಒಪ್ಪಿ, ಇದನ್ನೇ ಬಸವಣ್ಣನವರ ವಚನಗಳ
ವಚನಾಂಕಿತವನ್ನಾಗಿ ಬಳಸುತ್ತೇವೆ ಎಂದು ಒಪ್ಪಿ ಸೇರಿಕೊಳ್ಳುತ್ತಿದ್ದರೆ ಬರಲಿ ಎಂದು ಷರತ್ತು ಹಾಕಬೇಕು.

2. ಯಾವುದೇ ಪ್ರಸಂಗದಲ್ಲಿಯೂ 'ಲಿಂಗದೇವ' ವಚನಾಂಕಿತವನ್ನು ವಾಪಸ್ಸು
ಪಡೆಯಬಾರದು. ಈ ತತ್ತ್ವದ ಪ್ರತಿಷ್ಠಾಪನೆಗಾಗಿ ಎಷ್ಟೊಂದು ಕಷ್ಟ ಮತ್ತು ನಷ್ಟ
ಅನುಭವಿಸಬೇಕಾಯಿತು. ಆ ಸಂಕಷ್ಟದ ದಿನಗಳು ಈಗ ಕಳೆದುಹೋಗಿವೆ. ಇಂಥ ನಿರುಮ್ಮಳದ
ಸಮಯದಲ್ಲಿ ಏಕೆ ವಾಪಸ್ಸು ಪಡೆಯಬೇಕು?

3. ಲಿಂಗದೇವ ತತ್ತ್ವದ ಮಹತ್ವ ತಿಳಿದ ಬಳಿಕ ಈ ಪದವು ಶರಣರ ಜೀವನದಲ್ಲಿ
ಹಾಸುಹೊಕ್ಕಾಗಿದೆ. ಇನ್ನು ಅದಿಲ್ಲದ ಬಸವ ವಚನ ಮತ್ತು ಬಸವ ತತ್ತ್ವವನ್ನು ಅಳವಡಿಸಿಕೊಳ್ಳಲು
ಸಾಧ್ಯವಿಲ್ಲ. ಆದ್ದರಿಂದ ವಾಪಸ್ಸು ಪಡೆಯಲೇ ಕೂಡದು.

ಬೇಷರತ್ತಾಗಿಯೇ ಮಠಾಧೀಶರು, ಗಣ್ಯರು ನಮ್ಮೊಡನೆ ಸೇರಿಕೊಳ್ಳಲು ಅಥವಾ
ದೂರವಿಟ್ಟಿರುವ ನಮ್ಮನ್ನು ಸೇರಿಸಿಕೊಳ್ಳಲು ಆಶಿಸುತ್ತಾರೆಂದುಕೊಳ್ಳೋಣ. ಅವರೊಡನೆ
ಸೇರಬಹುದೆ ? ಯಾಕೋ ಅಂತರಾತ್ಮ ಒಪ್ಪದು. ಅವರು ಸೈದ್ಧಾಂತಿಕ ದೃಢತೆ ಉಳ್ಳವರಲ್ಲ. ಏನೋ
ಒಂದು ಅನಿವಾರ್ಯತೆ 'ಸಾಮಾಜಿಕವಾಗಿ ಬಂದಾಗ (ಜನತಾ ದಳದವರು ಚುನಾವಣೆ ಬಂದಾಗ
ಒಂದು ಗೂಡುವ ಮಾತನಾಡುವಂತೆ) ಸಾಮರಸ್ಯದ ಮಾತನಾಡುವರು. ನಂತರ

Digitalized by e-Sahithya Documentation Forum
Sponsored by Sarayu Foundation Trust

ಯಾರಿಂದಲಾದರೂ ಒತ್ತಡ ಬರುತ್ತಿದ್ದಂತೆಯೇ ಮತ್ತೆ 'ಟುಸ್' ಎಂದು -ಗಾಳಿ ಹೋದ ಚಕ್ರದಂತಾಗುವರು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡಬೇಕೆಂಬ ಚಳುವಳಿ ಪೂರ್ಣ ಪಕ್ವವಾಗಿರುವಾಗ ಅದನ್ನು ಕೆಡಿಸಿದ ಕುತಂತ್ರ ಮಾಡಿದರು. ಹೀಗಾಗಿ ಅಂಥ ಮಠಾಧೀಶರು ಮತ್ತು ವೀರಶೈವವಾದಿ ಲಿಂಗಾಯತ ಸಮಾಜದ ಗಣ್ಯರ ಜೊತೆ ಒಂದು ಧ್ಯೇಯಕ್ಕಾಗಿ ಹೋರಾಡಲು ಸೇರುವುದೇ ಒಂದು ವ್ಯರ್ಥ ಪ್ರಯತ್ನ ಎನಿಸದಿರದು. ಅವರುಗಳೆಲ್ಲ ಕೂಡಿ ಸಂಘಟನೆ ಮಾಡಲಿ. ನಾವಂತೂ ಎಂದಿಗೂ ಯಾರ ಒಳ್ಳೆಯ ಕೆಲಸಕ್ಕೂ ಅಡ್ಡಿ ಮಾಡುವವರಲ್ಲ ಎಂದು ಭರವಸೆ ಕೊಡುತ್ತೇವೆ.

* * *

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಪೂಜ್ಯ ಶ್ರೀಮನ್ ನಿರಂಜನ

ಮಹಾಜಗದ್ಗುರು ಮಾತೆ ಮಹಾದೇವಿ

ಅವರ 58ನೆಯ ವರ್ಧಂತಿ

ದಿ. 13-3-2004 ರ ಶರಣ(ಶನಿ)ವಾರ

ಕಾರ್ಯಕ್ರಮ ವಿವರ

ಬೆಳಗಿನ ಕಾರ್ಯಕ್ರಮ 10-30 ಕ್ಕೆ

ಸ್ಥಳ : ಬೆಂಗಳೂರಿನ ರಾಜಾಜಿನಗರದ

2ನೇ ಬ್ಲಾಕ್‌ನಲ್ಲಿರುವ ಬಸವ ಮಂಟಪದಲ್ಲಿ

* * * *

ಸಂಜೆ 6-00 ಗಂಟೆಗೆ

ವಿಜಯನಗರ ಬಡಾವಣೆಯ ಎಂ.ಸಿ. ಲೇಔಟ್‌ನ 5ನೇ ಮೇನ್‌ದಲ್ಲಿರುವ (ಗಾಯತ್ರಿ ಆಸ್ಪತ್ರೆ ಹಿಂಭಾಗ, ನ್ಯೂ ಪಬ್ಲಿಕ್ ಇಂಗ್ಲೀಷ್ ಸ್ಕೂಲ್ ಎದುರು) ಉದ್ಯಾನವನ ಪಕ್ಕದಲ್ಲಿರುವ ಆಟದ ಮೈದಾನದಲ್ಲಿ ನಡೆಯುತ್ತಿರುವ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳ ವಿಶ್ವಧರ್ಮ ಪ್ರವಚನ ವೇದಿಕೆಯಿಂದ ಸಾರ್ವಜನಿಕವಾಗಿ ಅಭಿನಂದನ ಕಾರ್ಯಕ್ರಮ.

-: ಸರ್ವರಿಗೂ ಹಾರ್ದಿಕ ಸುಸ್ವಾಗತ :-

ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ

2004 ರ ಏಪ್ರಿಲ್ 18 ರಿಂದ ಮೇ 3 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. (ಬ.ವ.ದೀ. 68)

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2003 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲದ ಮೇಲೆ ನಡೆಸಲಾಯಿತು. ತರಬೇತಿ ಕಮ್ಮಟವು ಅತ್ಯಂತ ಯಶಸ್ವಿಯಾಯಿತು. ಇದರಿಂದ ಪ್ರೇರಣೆಗೊಂಡ ಶರಣ ಬಂಧುಗಳು ಈ ವರ್ಷವೂ ಬೇಸಿಗೆ ರಜೆಯಲ್ಲಿ ಶಿಬಿರ ನಡೆಸಲು ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ.
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ -ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಿಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಶರಣ. ಮಹಾಂತೇಶ್ ಯೋಗಾಚಾರ್ಯ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 18-4-2004 ರಿಂದ 3-5-2004 ರವರೆಗೆ 16 ದಿವಸಗಳ ಕಾಲ ನಡೆಯುವ ಶಿಬಿರ ಮತ್ತು ಕಲ್ಯಾಣ ಪರ್ವ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

Digitalized by e-Sahithya Documentation Forum
Sponsored by Sarayu Foundation Trust

ಪರವಾನಗಿಯೊಡನೆ ಉಚಿತ ಅವಕಾಶ: ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ರಾಷ್ಟ್ರೀಯ ಬಸವ ದಳದವರು ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಏಪ್ರಿಲ್ 17 ರ ಸಂಜೆಯೊಳಗೆ ಅಥವಾ 18 ನೇ ತಾರೀಖು 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ- ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.
3. ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತೆಯ ಸೇವಾ ಕಾರ್ಯದಲ್ಲಿ ತೊಡಗುವ ಬ್ರಹ್ಮಚಾರಿಗಳು(ಸ್ವಯಂ ಸೇವಕರು) ಬೆಳಿಗ್ಗೆ ಮತ್ತು ರಾತ್ರಿ ಯೋಗಾಸನ, ಪೂಜೆ, ಪ್ರವಚನಗಳಲ್ಲಿ ಭಾಗವಹಿಸಿ ಉಳಿದ ಸಮಯದಲ್ಲಿ ಸೇವಾಕಾರ್ಯ ಮಾಡುವುದರಿಂದ ಅವರಿಗೆ ತರಬೇತಿ ಕಮ್ಮಟದಲ್ಲಿ ಉಚಿತ ಪ್ರವೇಶವಿದೆ. ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಲು ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸೂಚನೆ. ಪ್ರಾಥಮಿಕ ಶಾಲಾ ಹಂತದಿಂದ ಯಾವುದೇ ವಯಸ್ಸಿನ ವಿದ್ಯಾರ್ಥಿಗಳು ತರಬೇತಿ ಕಮ್ಮಟದ ಸದುಪಯೋಗ ಮಾಡಿಕೊಳ್ಳಬಹುದು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ

ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಕೂಡಲ ಸಂಗಮದಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಅದೇ ರೀತಿ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ- ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್ -ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-651921/652856

ಬಸವ ತತ್ತ್ವ ತರಬೇತಿ ಕಮ್ಮಟ

ಬಸವ ತತ್ತ್ವ ತರಬೇತಿ ಕಮ್ಮಟವು ದಿ. 18-4-2004 ರಿಂದ ಪ್ರಾರಂಭವಾಗಿ ದಿ. 3-5-2004 ರವರೆಗೆ ನಡೆಯುವುದು. ಮೇ 1, 2 ಮತ್ತು 3 ರಂದು ಕಲ್ಯಾಣ ಪರ್ವ ಇರುವುದು. ಪೂರ್ಣಾವಧಿಯ ಕಾಲ ಶಿಬಿರದಲ್ಲಿ ಭಾಗವಹಿಸಲಾಗದಿದ್ದವರು, ತಮಗೆ ಎಷ್ಟು ಕಾಲ ಸಾಧ್ಯವೋ ಅಷ್ಟು ದಿನ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು. ಆದ್ದರಿಂದ ತಮಗೆ ಅನುಕೂಲವಾದ ದಿವಸ ಬಂದು ಕಮ್ಮಟಕ್ಕೆ ಸೇರ್ಪಡೆಯಾಗಬಹುದು.

ಕಾರ್ಯಕರ್ತರಿಗೆ ಸೂಚನೆ: ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತೆ ಮಾಡಲು ಬಹಳಷ್ಟು ಕಾರ್ಯಕರ್ತರು ಬೇಕು. ತನು-ಮನಗಳಿಂದ ಸೇವೆ ಸಲ್ಲಿಸಲು ಅಪೂರ್ವ ಅವಕಾಶವಿದೆ. ಪ್ರೌಢಶಾಲೆ, ಪಿ.ಯು.ಸಿ ಪರೀಕ್ಷೆ ಸಹ ಮುಗಿದಿರುತ್ತವೆ. ಶಿಬಿರದಲ್ಲಿ ಭಾಗಿಗಳಾಗಿ ತರಬೇತಿ ಹೊಂದಲು ಅವಕಾಶವಿದೆ. ಆದ್ದರಿಂದ ಸ್ವಯಂ ಸೇವಕರಾಗಿ ಕೆಲಸ ಮಾಡಲು ಬಯಸುವವರು ಆದಷ್ಟು ಬೇಗನೆ ಬಿಡುವು ಮಾಡಿಕೊಂಡು ಬರಬೇಕೆಂದು ಸೂಚಿಸುತ್ತೇವೆ.

ಸಾಂಸ್ಕೃತಿಕ ಕಾರ್ಯಕ್ರಮ, ತರಬೇತಿ ಮತ್ತು ಸ್ಪರ್ಧೆ : ಕಲ್ಯಾಣ ಪರ್ವಕ್ಕೆ ಪೂರ್ವಭಾವಿಯಾಗಿ ನಡೆಯುವ ತರಬೇತಿ ಕಮ್ಮಟದ ಸಮಯದಲ್ಲಿ ವಚನ ಗಾಯನ, ವಚನ ಕಂಠಪಾಠ, ಆಶುಭಾಷಣ, ರಸಪ್ರಶ್ನೆ ಸ್ಪರ್ಧೆಯಲ್ಲದೆ ಸಮೂಹ ನೃತ್ಯ, ಕೋಲಾಟದ ತರಬೇತಿ ನೀಡಲಾಗುವುದು.

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು

ಬಸವ ಕಲ್ಯಾಣದಲ್ಲಿ ಮೇ 1, 2 ಮತ್ತು 3 ರಂದು ನಡೆಯಲಿರುವ 3ನೆಯ ಕಲ್ಯಾಣ ಪರ್ವ ಕಾರ್ಯಕ್ರಮದ ರೂಪುರೇಷೆ

1. ದಿ :	1-5-2004	ಕಲ್ಯಾಣ ಜ್ಯೋತಿ ಜ್ವಲನ	ಬೆಳಿಗ್ಗೆ 10-00
	1-5-2004	ಕಲ್ಯಾಣ ಪರ್ವ ಉದ್ಘಾಟನೆ	ಬೆಳಿಗ್ಗೆ 10-30
	1-5-2004	ಧರ್ಮಚಿಂತನ ಗೋಷ್ಠಿ	ಸಂಜೆ 5-00
2. ದಿ :	2-5-2004	ಶರಣರಿಗೆ ಶರಣಾರ್ಥಿ, ಸಮುದಾಯ ಪ್ರಾರ್ಥನೆ	ಬೆಳಿಗ್ಗೆ 10-30
	2-5-2004	ಮಡಿವಾಳ ಮಾಚಿದೇವ ಜಯಂತಿ	ಸಂಜೆ 5-00
	2-5-2004	ಸಾಂಸ್ಕೃತಿಕ ಕಾರ್ಯಕ್ರಮ	ರಾತ್ರಿ 9-00
3. ದಿ :	3-5-2004	ಶೂನ್ಯಪೀಠಾರೋಹಣದ ವಾರ್ಷಿಕೋತ್ಸವ ಮತ್ತು ಪೀಠಾಧೀಶರ ಸಂದೇಶ	ಬೆಳಿಗ್ಗೆ 10-30
	3-5-2004	ಮೆರವಣಿಗೆ ಮತ್ತು ಪಥ ಸಂಚಲನ	ಮಧ್ಯಾಹ್ನ 4-00
	3-5-2004	ಸಮಾರೋಪ ಸಮಾರಂಭ	ಸಂಜೆ 7-00

Digitalized by e-Sahithya Documentation Forum
Sponsored by Sarayu Foundation Trust

ಬಸವ ಕಲ್ಯಾಣ ಜಮೀನಿನ ಒಡೆತನದ ಸ್ಥಿರೀಕರಣ

- ಮಾತಾಜಿ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ ಬಸವ ಕಲ್ಯಾಣದಲ್ಲಿ ಏನಾದರೂ ಬಸವ ತತ್ತ್ವ ಪ್ರಚಾರಕ್ಕಾಗಿ ಮಠವೊಂದನ್ನು ಮಾಡಬೇಕೆಂಬ ಹಂಬಲ ಬಹಳವಿತ್ತು. 1986 ರಲ್ಲಿ ಜಾಗವನ್ನು ನೋಡಿದೆವು. ನಮಗೆ ಸೂಕ್ತವೆನಿಸುವ ಜಾಗ ಸಿಗಲಿಲ್ಲ. ಹುಣಸಗಿಯಲ್ಲಿ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನದ ಮುಕ್ತಾಯಕ್ಕೆ ಹೋದಾಗ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಇಂಜಿನಿಯರ್ ಕೂಡಲಸಂಗಮದ ದಯನೀಯ ಸ್ಥಿತಿ ಬಗ್ಗೆ ವಿವರಿಸಿದರು. 1987ರಲ್ಲಿ, ಬಾಗಲಕೋಟೆಯಲ್ಲಿ ಪೂಜ್ಯ ಅಪ್ಪಾಜಿಯವರ ಪ್ರವಚನವಾದಾಗ ಮುಕ್ತಾಯ ಕಾರ್ಯಕ್ರಮಕ್ಕೆ ನಾನು ಆಗಮಿಸಿದಾಗ ಹಂಬಲವು ಕಾರ್ಯರೂಪಕ್ಕೆ ಬಂದು ಜಮೀನನ್ನು ಖರೀದಿಸಿದೆವು. ಟ್ರಸ್ಟ್ ಮಾಡಿದೆವು, ಅಭಿವೃದ್ಧಿ ಕಾರ್ಯ ಕೈಗೊಂಡೆವು. 1988ರ ಜೂನ್ ದಲ್ಲಿ ಸರ್ಕಾರವು ಒಂದು ಸಮಿತಿ ರಚನೆ ಮಾಡಿ, ವರದಿಯನ್ನು ತಯಾರಿಸಿತು.

ಬಸವ ಕಲ್ಯಾಣದಲ್ಲಿ ಮಠ ಮಾಡಬೇಕೆಂಬ ಪೂಜ್ಯ ಗುರುಗಳ ಹಂಬಲ ಹಾಗೆಯೇ ಉಳಿದಿತ್ತು. 21-12-2001 ರಂದು 3 ಎಕರೆ ಜಮೀನನ್ನು ಖರೀದಿಸಿದೆವು. ಅಂದೇ ಜಮೀನಿನ ಕಬ್ಜಾ ಪಡೆದು, ಬಾವುಟ ಹಾರಿಸಿ ಶರಣ ಮೇಳದ ಸಿದ್ಧತೆಯಲ್ಲಿ ತೊಡಗಿದೆ. ಕಲ್ಯಾಣ ಪರ್ವ ಮಾಡುವ ಸಂಕಲ್ಪ ತಳೆದು ಕರಪತ್ರ ಮುದ್ರಿಸಿ ಶರಣ ಮೇಳದಲ್ಲಿ ಹಂಚಿದಾಗ ಬಹು ಜನರಿಗೆ ಖುಷಿ. ಅದು ಮುಗಿಯುತ್ತಲೇ ಬಸವ ಕಲ್ಯಾಣಕ್ಕೆ ಹೋಗಿ ಒಂದು ಬೋರ್ ತೋಡಿಸಿದೆವು ದಿ. 30-12-2001ರಂದು. ಶರಣೆಯರು ಇರಲು ಮನೆ ಬೇಕೆಂದು ಒಂದು ಬಾಡಿಗೆ ಮನೆಯನ್ನು ದಿ. 21-12-2001 ರಂದೇ ಹಿಡಿಯಲಾಗಿದ್ದಿತು. ಗಂಡು ಮಕ್ಕಳು, ಖರೀದಿಸಿದ ಜಮೀನಿನಲ್ಲೇ ಇರಬೇಕು ಎಂದುದಕ್ಕೆ ಒಂದು ಪ್ಲಾಸ್ಟಿಕ್ ಶೀಟ್ ಜೋಪಡಿ ಹಾಕಿಕೊಂಡು ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು ಮತ್ತು ಶರಣ. ಶಿವರಾಯ ಚಂದ್ರಕಂಠಿ ಅಲ್ಲೇ ಉಳಿದಿದ್ದರು. ಇನ್ನು ಕಟ್ಟಡ ಕೆಲಸ ಆರಂಭಿಸಬೇಕೆಂದು ಸಿಮೆಂಟ್ ಇಡಲು ಒಂದು ಷೆಡ್ ಹಾಕಲಾಗುತ್ತಿತ್ತು. ಅಷ್ಟರಲ್ಲಿ ಸಿಂಹಸ್ವಪ್ನದಂತೆ ಬಂದೆರಗಿತು ಸ್ಥಳೀಯ ಕೋರ್ಟ್ ನೋಟೀಸ್.

ಬಹುಶಃ ಭಾರತ ದೇಶದಲ್ಲಿ ನಡೆಯುವ ಇಂಥ ಅಸಾಮಾನ್ಯ ಘಟನೆ ಜಗತ್ತಿನ ಬೇರಾವ ದೇಶದಲ್ಲೂ ನಡೆಯಲಸಾಧ್ಯ. ಕಳೆದ ವಾರವಷ್ಟೇ ಓರ್ವ (ಅ)ನ್ಯಾಯಾಧೀಶ 40,000 ಲಂಚ ತಿಂದು ರಾಷ್ಟ್ರಪತಿಗೆ, ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ನೋಟೀಸ್ ಸರ್ವ್ ಮಾಡಿದ್ದು ಇಡೀ ದೇಶಕ್ಕೆ ತಿಳಿದು ಬಂದಿದೆ. ಇದೇ ಮಾತನ್ನು ಮೊದಲು ಬರೆದಿದ್ದರೆ ಯಾರಾದರೂ ನಂಬುತ್ತಿದ್ದರೋ ಇಲ್ಲವೊ! ಲಂಚದ ಮಹಿಮೆ ಏನು ಬೇಕಾದರೂ ಮಾಡಿಸಬಲ್ಲುದೆಂಬುದನ್ನು ಆ ಘಟನೆ ಸಾಬೀತು ಪಡಿಸಿದೆ. 20 ರೂಪಾಯಿಯ (ಬಹುಶಃ ಕರೀಂಲಾಲನ ಖೋಟಾ) ಛಾಪಾ ಕಾಗದದ ಮೇಲೆ ಒಂದು ಗಿಫ್ಟ್

ಡೀಡ್ ಪತ್ರ ಬರೆದುಕೊಂಡ ಕಾಶಪ್ಪ ಮೂಲಗೆ ಎಂಬ ಓರ್ವ ವ್ಯಕ್ತಿ ತಾನು ವಚನ ಸಾಹಿತ್ಯ ಸಂರಕ್ಷಣಾ ಸಮಿತಿ ಅಧ್ಯಕ್ಷನೆಂದು, ಈ ಉದ್ದೇಶಕ್ಕಾಗಿ ಶಾಮರಾವ ಕಟ್ಟಿ - ಅಂದರೆ ನಾವು ಖರೀದಿಸಿದ ಜಮೀನಿನ ಹಿಂದಿನ ಮಾಲಿಕ, ಆತನಿಗೆ ಜಮೀನನ್ನು ಕೊಡುಗೆಯಾಗಿ ಕೊಟ್ಟಿರುವುದಾಗಿಯೂ, ಪುನಃ ಮಾತೆ ಮಹಾದೇವಿಯವರಿಗೆ ಮಾರಿರುವುದು ಅಸಿಂಧುವೆಂದು, ಈ ಒಡೆತನ ನಿರ್ಧಾರವಾಗುವವರೆಗೆ ಪ್ರಸ್ತುತ ಜಮೀನಿನಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದೆಂದು ತಡೆಯಾಜ್ಞೆ ಕೋರಿದಾಗ ನ್ಯಾಯಾಧೀಶರು ಯಥಾ ಸ್ಥಿತಿ (ಸ್ಟೇಟಸ್ ಕೋ) ಆಜ್ಞೆ ಕೊಟ್ಟು ವರ್ಗವಾಗಿ ಹೋಗಿಬಿಟ್ಟರು. ಕಾಶಪ್ಪ ಮೂಲಗೆಯಂಥ ಒಬ್ಬ ಅನಾಮಿಕ, ಸಾಮಾನ್ಯ ಮನುಷ್ಯ ಇಷ್ಟೆಲ್ಲ ಮಾಡಬಲ್ಲನೆ? ಈ ಕಾರ್ಯತಂತ್ರದ ಹಿಂದಿನ ಮಾಸ್ಟರ್ ಬ್ರೇನ್ ಅಂತಃಕರಣ ಉಳ್ಳ ಮುರುಘರಾಜೇಂದ್ರ ಶರಣರು (ಅಥವಾ ಅವರ ಬ್ರೇನ್ ಆಗಿರುವ ಆಡಳಿತಾಧಿಕಾರಿಯೂ ಇರಬಹುದು!) ಆ ಒಂದು ತುಂಡು ಕಾಗದ ಹಿಡಿದು ನಮಗೆ ಕೊಡಬಾರದ ಯಾತನೆ ಕೊಟ್ಟರು. ಒಂದು ಇಟ್ಟಿಗೆ, ಕಲ್ಲನ್ನು ಸರಿಸಿಟ್ಟರೂ ಅವರ ಪ್ರತಿನಿಧಿಗಳಾಗಿ ಪೋಲೀಸರೆಂಬ ಯಮದೂತರು ಪ್ರತ್ಯಕ್ಷರಾಗುತ್ತಿದ್ದರು.

ಜಮೀನಿನ ಹಿಂದಿನ ಮಾಲಿಕ ಶಾಮರಾವ ಕಟ್ಟಿ ಪೋಲೀಸ್ ಕಂಪ್ಲೆಂಟ್ ಕೊಟ್ಟು ತನ್ನ ಸಹಿಯನ್ನು ಫೋರ್ಜರಿ ಮಾಡಲಾಗಿದೆಯೆಂದೂ, ತಾನು ಯಾರಿಗೂ ಆ ಜಮೀನನ್ನು ದಾನವಾಗಿ ಕೊಟ್ಟಿರಲಿಲ್ಲವೆಂದು, ಮಾತೆ ಮಹಾದೇವಿಯವರು ಹಣ ಕೊಟ್ಟು ಖರೀದಿಸಿದ್ದರಿಂದ ಅವರಿಗೆ ಮಾರಲಾಗಿದೆ ಎಂದು ತಿಳಿಸಿದನು. ಜಮೀನು ವಿವಾದದಲ್ಲಿದೆ ಎಂಬ ನೆಪ ಒಡ್ಡಿ ಪೋಲೀಸರು ಮೊದಲ ಕಲ್ಯಾಣ ಪರ್ವಕ್ಕೆ ಆಗಮಿಸಿದ ಶರಣರಿಗೆ ಹೊಡೆದು ಬಡಿದು ಹಿಂಸಿಸಿದರು. ಆ ಭಯಂಕರ ದೃಶ್ಯ ಇನ್ನೂ ಜನರಿಗೆ, ಕಣ್ಣಿಗೆ ಕಟ್ಟಿದಂತಿದೆ. ವಚನ ಸಾಹಿತ್ಯ ಸಂರಕ್ಷಣಾ ಸಮಿತಿ ನೋಂದಣೆಯಾಗಿರಲಿಲ್ಲ. ಆಗಿದ್ದರೂ ವ್ಯವಸಾಯದ ಜಮೀನು ಖರೀದಿಸಲು ಬರುವಂತಿಲ್ಲ. ನಮ್ಮ ಖರೀದಿ ಪತ್ರ, ಸಬ್ ರಿಜಿಸ್ಟ್ರಾರ್ ಮುಂದೆ ನೋಂದಣೆಯಾಗಿತ್ತಲ್ಲದೆ ಶಾಮರಾವ್ ಅವರ ಇಡೀ ಕುಟುಂಬದ ಸದಸ್ಯರ ಸಾಕ್ಷಿ ಬಿದ್ದಿತ್ತು.

ಕರ್ನಾಟಕ ನೋಂದಣಿ ಕಾಯ್ದೆ ಪ್ರಕಾರ ಕೊಡುಗೆ, ದಾನದ್ದಾದರೂ ಆ ಆಸ್ತಿ ಶುಲ್ಕ ತುಂಬಿ ನೋಂದಣಿ ಆಗಬೇಕು. ಈ ಎಲ್ಲ ಕಾರಣಗಳಿಂದ ಕಾಶಪ್ಪ ಮೂಲಗೆಯ ಖೋಟಾ ಛಾಪಾ ಕಾಗದದ ಪತ್ರ ಅಸಿಂಧುವಾಗಿ ಜಮೀನು ನಮ್ಮ ಹೆಸರಿಗೆ ಖಾತೆಯಾಗಿ ಸುಮಾರು ಎರಡೂವರೆ ವರ್ಷಗಳ ಯಾತನೆಗೆ ಪೂರ್ಣ ವಿರಾಮ ಬಿತ್ತು. ಅಸಹನೀಯವಾದ ತೊಂದರೆಗಳನ್ನು ಅನುಭವಿಸಬೇಕಾಯಿತಾದರೂ ನಮ್ಮ ಶರಣಬಂಧುಗಳು ಛಲ ತೊಟ್ಟು ನಿಂತುದರಿಂದ ಎಲ್ಲವೂ ಸುಖಾಂತ್ಯವಾಯಿತು. ಏನಿಲ್ಲದೆ ಇರುವಲ್ಲಿಯೂ ಸಮಸ್ಯೆ ಸೃಷ್ಟಿಸುವುದು, ಸಂಬಂಧಪಡದಿರುವ ಆಸ್ತಿಗಳನ್ನೆಲ್ಲ ವಶಪಡಿಸಿಕೊಳ್ಳುವ ಹವ್ಯಾಸ, ಕೃತಕ ದಾಖಲೆ ನಿರ್ಮಿಸಿ ಜನರನ್ನು ಯಾತನೆಗೊಳಪಡಿಸುವುದು ಮಠಾಧಿಕಾರಿಗಳಿಗೆ ಸಲ್ಲದ ನಡೆ. ಇನ್ನಾದರೂ ಇಂಥ ದುಷ್ಟ ಚಟುವಟಿಕೆಗಳನ್ನು ಚಿತ್ರದುರ್ಗದ ಬೃಹನ್ಮಠದ ಶರಣರು ನಿಲ್ಲಿಸುವರೆಂದು ಆಶಿಸಬಹುದೇನೊ ?!

Digitalized by e-Sahithya Documentation Forum
Sponsored by Sarayu Foundation Trust

17ನೆಯ ಶರಣ ಮೇಳದಲ್ಲಿ ಕೈಗೊಂಡ ನಿರ್ಣಯಗಳು

1. ನಾಡಗೀತೆ ಮೂಲರೂಪದಲ್ಲಿರಲಿ

"ಶ್ರೀ ಕುವೆಂಪು ಅವರು ರಚಿಸಿದ ಜಯಭಾರತ ಜನನಿಯ ತನುಜಾತೆ" ಎಂಬ ಗೀತೆಯನ್ನು ಸರ್ಕಾರವು ನಾಡಗೀತೆಯನ್ನಾಗಿ ಅಂಗೀಕರಿಸಿದ್ದು ಅಭಿನಂದನಾರ್ಹ. ಆದರೆ ಮಧ್ವರ ಹೆಸರು ಅದರಲ್ಲಿ ಇಲ್ಲವಾದ ಕಾರಣ ಬಸವೇಶ್ವರರ ಆದಿಯಾಗಿ ಉಳಿದೆಲ್ಲ ಮಹಾತ್ಮರ, ದಾರ್ಶನಿಕರ, ಕವಿಪುಂಗವರ ಹೆಸರನ್ನು ತೆಗೆದು ಹಾಡನ್ನು ಸಂಕ್ಷಿಪ್ತಗೊಳಿಸಿದ್ದು ಖಂಡನಾರ್ಹ. ಆದ್ದರಿಂದ ಶ್ರೀ ಕುವೆಂಪು ಅವರು ಯಾವ ಆಶಯವನ್ನು ಇಟ್ಟುಕೊಂಡು ರಚಿಸಿದ್ದರೋ ಅದೇ ರೂಪದಲ್ಲಿ ಆ ಗೀತೆ ಹಾಡಲ್ಪಡಬೇಕು ಎಂದು ಕರ್ನಾಟಕ ಸರ್ಕಾರವನ್ನು ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತು.

2. ಬಸವೇಶ್ವರ ಐಕ್ಯಮಂಟಪದಲ್ಲಿ ಮಂತ್ರ, ಬಸವ ಭಾವಚಿತ್ರ

ಕೂಡಲಸಂಗಮಕ್ಕೆ ಅಂತರರಾಷ್ಟ್ರೀಯ ಕೀರ್ತಿ ಬರುತ್ತಿರುವುದು ಬಸವಣ್ಣನವರ ಆಗಮನ, ಇರುವಿಕೆ ಮತ್ತು ಅಂತಿಮವಾಗಿ ಕೂಡಲ ಸಂಗಮದಲ್ಲಿ ಇಚ್ಛಾಮರಣಿಗಳಾಗಿ ಲಿಂಗೈಕ್ಯರಾದುದುರಿಂದ. ಹೀಗಾಗಿ ಸಂಗಮೇಶ್ವರ ದೇವಾಲಯದಂತೆ ಬಸವಣ್ಣನವರ ಲಿಂಗೈಕ್ಯ ಮಂಟಪವು ಬಹುಜನರನ್ನು ಆಕರ್ಷಿಸುತ್ತಿದೆ. ಆದ್ದರಿಂದ ಐಕ್ಯ ಮಂಟಪದಲ್ಲಿ ವಿಶ್ವಗುರು ಬಸವಣ್ಣನವರ ದೊಡ್ಡದಾದ ಭಾವಚಿತ್ರವನ್ನು ಇಡಬೇಕು, ಮಂಟಪದಲ್ಲಿ "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಂಬ ಮಂತ್ರವನ್ನು ಬರೆಸಿ ಹಾಕಿಸಲು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ಒತ್ತಾಯಿಸಬೇಕು.

3. ಕೂಡಲ ಸಂಗಮದಲ್ಲಿರುವ ಕುರೂಪದ ಮೂರ್ತಿ ಬೇಡ

ಸಂಗಮೇಶ್ವರ ದೇವಾಲಯವನ್ನು ಪ್ರವೇಶಿಸುವ ಮೊದಲು ಸಿಗುವ ಬಸವೇಶ್ವರ ವೃತ್ತದಲ್ಲಿ ಬಸವಣ್ಣನವರ ಅತ್ಯಂತ ಕುರೂಪದ ಮೂರ್ತಿಯನ್ನು ಇಡಲಾಗಿದೆ. ಬಸವಣ್ಣನವರನ್ನು ಎಷ್ಟೂ ಹೋಲದೆ ಇರುವ ಅಂಥ ಕುರೂಪದ ಮೂರ್ತಿಯನ್ನು ತೆಗೆದು ಪ್ರಮಾಣ ಬದ್ಧವಾದ ಬೇರೊಂದು ಬಸವ ಮೂರ್ತಿಯನ್ನು ಅಲ್ಲಿ ಇಡಬೇಕು ಎನ್ನುವ ನಿರ್ಣಯವನ್ನು ಅಂಗೀಕರಿಸಲಾಯಿತು.

4. ಇಷ್ಟಲಿಂಗಾರ್ಚನೆ ದಿನಕ್ಕೊಮ್ಮೆ ಕಡ್ಡಾಯ

ನಿರಾಕಾರ ದೇವನ ಸಾಕಾರ ಕುರುಹಾಗಿ ಬ್ರಹ್ಮಾಂಡದ ಆಕಾರದಲ್ಲಿ ರೂಪಿಸಲ್ಪಟ್ಟ ಇಷ್ಟಲಿಂಗವು ಸರ್ವಶ್ರೇಷ್ಠ ಉಪಾಸ್ಯ ವಸ್ತುವಾಗಿದ್ದರೂ ಅಜ್ಞಾನದಿಂದ ಅನೇಕ ಲಿಂಗಾಯತರು ಅದನ್ನು ಧರಿಸದೆ, ದಿನಕ್ಕೊಮ್ಮೆಯೂ ಪೂಜಿಸದೆ ಉದಾಸೀನ ಮಾಡುತ್ತಿರುವರು. ಕನಿಷ್ಠ ಪಕ್ಷ ದಿನಕ್ಕೊಮ್ಮೆಯಾದರೂ ಪೂಜಿಸುವುದು ಕಡ್ಡಾಯವಾಗಿ, ದಿನಕ್ಕೆ ಎರಡು ಬಾರಿ ಪೂಜಿಸಬೇಕೆಂಬ ಸಾಧಕರು ದೀಕ್ಷೆಯ ಸಮಯದಲ್ಲಿ ಗುರುಗಳ ಬಳಿ ಪ್ರತಿಜ್ಞೆಗೈದು ಎರಡು ಬಾರಿ ಪೂಜಿಸಬಹುದೆಂದು ನಿರ್ಣಯಿಸಲಾಯಿತಲ್ಲದೆ ಜಾತಿ ಲಿಂಗಾಯತರನ್ನು ಇಷ್ಟಲಿಂಗಧಾರಣೆಗೆ ಮತ್ತು ದೀಕ್ಷೆ ಪಡೆಯಲು ಪ್ರೇರಣೆ ನೀಡಲು ವ್ಯವಸ್ಥಿತ ಪ್ರಚಾರವನ್ನು ಮಾಡಬೇಕೆಂದು ನಿರ್ಣಯಿಸಲಾಯಿತು. ಜನಸಾಮಾನ್ಯ

ಲಿಂಗಾಯತರು ಒಂದು ಬಾರಿ, ಸ್ವಾಮಿಗಳು-ಸಾಧಕರು ಎರಡು ಬಾರಿ ಪೂಜಿಸಬೇಕು. ತ್ರಿಕಾಲ ಪೂಜೆ ಐಚ್ಛಿಕವಾಗಿ ಪರಿಗಣಿಸಬೇಕು.

5. ರಾಷ್ಟ್ರೀಯ ಬಸವ ದಳದಿಂದ ಪ್ರಾಣಬಲಿ ತಪ್ಪಿಸಲು ಹೋರಾಟ

ಮೂಢ ನಂಬಿಕೆಗಳು ಬಹಳ ಬಲವಾಗಿರುವ ಭಾರತ ದೇಶದಲ್ಲಿ ಸ್ತ್ರೀ ದೇವತೆಗಳ ಹೆಸರಿನಲ್ಲಿ ಪ್ರಾಣಬಲಿ ನಡೆಯುವುದು ಅಮಾನವೀಯ. ಆದ್ದರಿಂದ ರಾಷ್ಟ್ರೀಯ ಬಸವ ದಳವು ಸಮಾನ ಮನಸ್ಕ ಸಂಸ್ಥೆಗಳ ಸಹಯೋಗದೊಡನೆ ಜನಜಾಗೃತಿ ಕಾರ್ಯ ಹಮ್ಮಿಕೊಂಡು, ಕಾನೂನು ಪಾಲಕರ ಸಹಕಾರದೊಡನೆ ಪ್ರಾಣ ಬಲಿ ತಡೆಗಟ್ಟಲು ಆಂದೋಲನ ಹಮ್ಮಿಕೊಳ್ಳಬೇಕು.

6. ಬಸವಾಯತ ದೀಕ್ಷೆ ಎಲ್ಲರಿಗೂ ಮುಕ್ತ

ಲಿಂಗಾಯತ ಧರ್ಮವು ಸರ್ವ ಸಮಾನತೆಯನ್ನು ಸಾರುತ್ತಿದ್ದು ಅದರ ಸ್ಥಾಪಕ ಬಸವಣ್ಣನವರ ಆಶಯದಂತೆ ಎಲ್ಲರಿಗೂ ದೀಕ್ಷೆಯ ಮೂಲಕ ಲಭ್ಯವಿರುತ್ತದೆ. ಆದರೆ ಕೆಲವು ಜನರಿಗೆ ಒಮ್ಮೆಗೇ ಮಾಂಸಾಹಾರವನ್ನು ಬಿಟ್ಟು ಸಸ್ಯಾಹಾರ ಜೀವನ ವಿಧಾನಕ್ಕೆ ಬರುವುದು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಅಂಥವರಿಗೆ ಆಹಾರದ ವಿಷಯದಲ್ಲಿ ಕಡ್ಡಾಯತೆ ಮಾಡದೆ ಬಸವಾಯತ ದೀಕ್ಷೆಯನ್ನು ನೀಡಬೇಕೆಂದು, ಅವರು ಜಪತಪಧ್ಯಾನಗಳನ್ನು ಮಾಡುತ್ತ ಸಸ್ಯಾಹಾರ ಜೀವನ ವಿಧಾನ ಅಳವಡಿಸಿಕೊಂಡಾಗ ಲಿಂಗಾಯತ ದೀಕ್ಷೆ ಪಡೆಯಬಹುದೆಂದು ನಿರ್ಣಯಿಸಲಾಯಿತು. ಜಾತಿ ಮತ ಪಂಥ ಧರ್ಮಭೇದವಿಲ್ಲದೆ ಎಲ್ಲರೂ ಬಸವಾಯತ ದೀಕ್ಷೆ ಪಡೆದುಕೊಂಡು ಜನ್ಮವನ್ನು ಧನ್ಯ ಮಾಡಿಕೊಳ್ಳಬೇಕೆಂಬ ಪ್ರಚಾರ ಆಂದೋಲನವನ್ನು ಪ್ರಾರಂಭಿಸಲು ನಿರ್ಣಯಿಸಲಾಯಿತು.

7. ಕಲ್ಯಾಣ ರಾಷ್ಟ್ರ ನಿರ್ಮಾಣ ವೇದಿಕೆಗೆ ಚಾಲನೆ

ಭಾರತ ದೇಶವು ಸ್ವಾತಂತ್ರ್ಯ ಪಡೆದು ಸ್ವರಾಜ್ಯವಾಯಿತೇ ವಿನಃ ಸುರಾಜ್ಯವಾಗಲಿಲ್ಲ. ಮತದಾರರು ಹಣ-ಹೆಂಡಗಳಿಗೆ ಮಾರು ಹೋಗಿ ಸುರಾಜ್ಯದ ಬದಲಿಗೆ ಸುರಾರಾಜ್ಯವಾಗಿದೆ. ಇದಕ್ಕೆ ಕಾರಣ ಹಣ-ಹೆಂಡಗಳಿಗೆ ಮಾರು ಹೋಗಿ ಮತದಾರರು ಅಯೋಗ್ಯರಿಗೆ ಮತ ನೀಡುವುದೇ ಆಗಿದೆ. ಪ್ರಜ್ಞಾವಂತರು ಮತದಾನ ಮಾಡದೆ ಚುನಾವಣೆಯ ದಿನದಂದು ಮನೆಯಲ್ಲಿ ಟಿ.ವಿ. ಮುಂದೆ ಕೂಡ್ರುವರು. ಚುನಾವಣೆಯು ಹತ್ತಿರ ಬರುತ್ತಿರುವುದರಿಂದ ರಾಷ್ಟ್ರೀಯ ಬಸವ ದಳದ ಒಂದು ಅಂಗವಾಗಿ ಕಲ್ಯಾಣ ರಾಷ್ಟ್ರ ನಿರ್ಮಾಣ ವೇದಿಕೆ ಎಂಬ ಸಾಂಸ್ಕೃತಿಕ ಸಂಘಟನೆಯ ಮೂಲಕ ಮತದಾರರನ್ನು ಜಾಗೃತಿ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

8. ಸೋನಿಯಾ ಪ್ರಧಾನಿಯಾಗುವುದು ಸೂಕ್ತವಲ್ಲ

ವಿದೇಶಿ ಮೂಲದ ಓರ್ವ ಮಹಿಳೆ ಈ ದೇಶದ ಪ್ರಧಾನಿಯಾಗುವುದು ಯಾವುದೇ ರೀತಿ ಸೂಕ್ತವಲ್ಲ. ನೂರಾ ಐದು ಕೋಟಿ ಭಾರತೀಯರು ಇರುವ ದೇಶಕ್ಕೆ, ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಭಾರತೀಯರು ಬುದ್ಧಿವಂತರು ಎಂಬ ಕೀರ್ತಿಗೆ ಪಾತ್ರವಾಗಿರುವಾಗ ಈ ದೇಶವನ್ನು ಆಳಲು ಒಬ್ಬ ಭಾರತೀಯನೂ ಯೋಗ್ಯನಲ್ಲ ಎಂಬುದನ್ನು ಘೋಷಿಸುವಂತೆ, ವಿದೇಶಿ ಮೂಲದ ಶ್ರೀಮತಿ ಸೋನಿಯಾ ಪ್ರಧಾನಿಯಾಗುವುದು ಭಾರತೀಯ ಪರಂಪರೆಗೆ ಅವಮಾನ ಮಾಡಿದಂತೆ ಎಂದು ಭಾವಿಸಲಾಯಿತು.

Digitalized by e-Sahithya Documentation Forum
Sponsored by Sarayu Foundation Trust

9. ಮುಂಬರುವ ಚುನಾವಣೆಯಲ್ಲಿ ಪಕ್ಷಾಧಾರಿತವಾಗಿ ಮತದಾನ ಮಾಡುವುದಕ್ಕಿಂತಲೂ ವ್ಯಕ್ತಿಗಳ ಚಾರಿತ್ರ್ಯ, ಆದರ್ಶ, ಜನ ಸೇವೆ ಮಾಡುವ ಪ್ರವೃತ್ತಿ ಮುಂತಾದುವನ್ನು ಗಮನದಲ್ಲಿಟ್ಟುಕೊಂಡು ಮತದಾನ ಮಾಡುವುದು ಸೂಕ್ತವೇನೋ ಎಂಬ ನಿರ್ಣಯ ತೆಗೆದುಕೊಳ್ಳಲಾಯಿತಾದರೂ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳ ಸಭೆಯೊಂದನ್ನು ಕರೆದು ನಿರ್ಧರಿಸಬೇಕೆಂದು ನಿರ್ಣಯಿಸಲಾಯಿತು.

ಪ್ರಾಣಿ ಬಲಿ ತಡೆಗೆ ರಾಷ್ಟ್ರೀಯ ಬಸವ ದಳದ ಪ್ರಯತ್ನ

ಜೀವ ದಯೆ, ಅಹಿಂಸೆ ಕುರಿತು ಜೈನ ಧರ್ಮೀಯರಾದ ಮುಂದಾಳುಗಳು ಬಹಳ ಪ್ರಚಾರ ಮಾಡುತ್ತಿದ್ದಾರೆ ಮಾತ್ರವಲ್ಲ ಸಕ್ರಿಯ ಪ್ರಯತ್ನ ಮಾಡುತ್ತಿದ್ದಾರೆ. ಹೇಗೆ ಎನ್.ಡಿ.ಎ. ಸರ್ಕಾರದಲ್ಲಿ ವಿಷಯಾಧಾರಿತವಾಗಿ ವಿವಿಧ ಪಕ್ಷಗಳು ಒಟ್ಟುಗೂಡಿ ಕೆಲಸ ಮಾಡುತ್ತವೋ ಹಾಗೆ ಸ್ವಯಂ ಸೇವಾ ಸಂಘಟನೆಗಳು ಸಹ ವಿಷಯಾಧಾರಿತವಾಗಿ ಪರಸ್ಪರ ಸಹಕಾರ ನೀಡುವುದು ಅತ್ಯಗತ್ಯವಾಗಿದೆ. ಅಹಿಂಸೆ ಮತ್ತು ಜೀವದಯೆ ಕುರಿತು ಜೈನ ಮತ್ತು ಲಿಂಗಾಯತ ಧರ್ಮಗಳು ಸಮಾನ ವಿಚಾರಧಾರೆ ಹೊಂದಿವೆ. ಈ ಪ್ರಶ್ನೆ ಕೇವಲ ಒಂದು ಧರ್ಮ, ಒಂದು ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಇಡೀ ಮಾನವೀಯತೆ ಎಂಬ ಮೌಲ್ಯಕ್ಕೆ ಸಂಬಂಧಿಸಿದೆ. ಕಾನೂನಿನ, ಕಾನೂನಿನ ಪಾಲಕರ ನೆರವಿಲ್ಲದೆ ಕೇವಲ ಸ್ವಯಂ ಸೇವಾ ಸಂಘಟನೆಗಳು ಏನೇನೂ ಸಾಧಿಸಲಾರವು. ಬೊಮ್ಮಸಾಗರದಲ್ಲಿ ದುರ್ಗಾದೇವಿಗೆ ನೀಡುತ್ತಿದ್ದ ಪ್ರಾಣಿ ಬಲಿ ತಡೆಯುವಲ್ಲಿ ಜಿಲ್ಲಾಧಿಕಾರಿಗಳು, ತಹಸೀಲ್ದಾರ್, ಪೋಲೀಸ್ ಇಲಾಖೆ ಒಟ್ಟುಗೂಡಿ ಸ್ವಯಂ ಸೇವಾ ಸಂಘಟನೆಗಳನ್ನು ಬೆಂಬಲಿಸಿ ಕೆಲಸ ಮಾಡಿದ್ದು ಅಭಿನಂದನಾರ್ಹ. ಇಡೀ ದೇಶಕ್ಕೆ ಇದು ಮಾದರಿಯಾಗುತ್ತಿದೆ. ಈ ಮೂವರ ಸಹಕಾರವಿಲ್ಲದೆ ಯಾರಾದರೂ ಮೂಢ ರಾಜಕಾರಣಿಗಳ ಪ್ರಚೋದನೆ ಇದ್ದರೆ ಆಗ ಪೋಲೀಸರು ಪ್ರಾಣಿವಧೆ ತಡೆಯುವುದಿರಲಿ, ಅಹಿಂಸಾತ್ಮಕ ಹೋರಾಟದ ಮುಂದಾಳತ್ವ ವಹಿಸಿದ ಸಾತ್ವಿಕರನ್ನೇ ಚಚ್ಚಿಹಾಕಿ ಬಿಡುವರು.

ಯಾವುದೇ ದೇವಾಲಯದಂತಹ ಪವಿತ್ರ ಸ್ಥಳದಲ್ಲಿ ಪ್ರಾಣಿ ಬಲಿ ನಡೆಯಬಾರದೆಂಬ ಕಾನೂನು ಇದೆ. ಆದರೆ ಮಂತ್ರಿಗಳು, ಶಾಸಕರು ಮುಂದಾಳತ್ವ ವಹಿಸಿ ಪ್ರೋತ್ಸಾಹಿಸುವಾಗ ಕಾನೂನು ಮೌನ ತಾಳುತ್ತದೆ. ಕಾನೂನು ಪಾಲಕರು ಕಣ್ಣಿದ್ದೂ ಕುರುಡರಾಗಿರುತ್ತಾರೆ. ಆದ್ದರಿಂದ ಈ ದಿಶೆಯಲ್ಲಿ ಕೆಲವೊಂದು ಕಾರ್ಯಯೋಜನೆಗಳನ್ನು ರೂಪಿಸಬಹುದು :

1. ದೇವಿಗೆ ಪ್ರಾಣಿ ಬಲಿ ಕೊಡುವುದು ಒಂದು ಧಾರ್ಮಿಕ ವಿಧಿ ಎಂಬ ಮೂಢನಂಬಿಕೆ ಬಹಳ ಬಲವಾಗಿ ತುಂಬಿರುವುದರಿಂದ ಮೊದಲು ಜನರ ಮನಸ್ಸನ್ನು ಪರಿವರ್ತಿಸಲು ರಾಷ್ಟ್ರೀಯ ಬಸವ ದಳದವರು ಯತ್ನಿಸಬೇಕು. ಈ ದಿಶೆಯಲ್ಲಿ ಒಂದು ಕಿರು ಹೊತ್ತಿಗೆಯನ್ನು ಸಿದ್ಧಪಡಿಸಿಕೊಡಲಾಗುವುದು.
2. ಪ್ರಾಣಿ ದಯಾ ಸಂಘ, ಜೈನ ಸಮಾಜದೊಡನೆ ಜೊತೆಗೂಡಿ ಕಾರ್ಯೋನ್ಮುಖರಾಗಬಹುದು.
3. ಎಲ್ಲೆಲ್ಲಿ ದೇವರ ಹೆಸರಿನಲ್ಲಿ ಬಲಿ ನಡೆಯುತ್ತಿದೆಯೋ, ಆ ಸ್ಥಳಗಳ, ಆ ಗುಡಿಗಳ ಪಟ್ಟಿ ತಯಾರು ಮಾಡಬೇಕು ಮತ್ತು ಆ ಊರು ಮತ್ತು ಬಲಿ ನಡೆಯುವ ದಿನಾಂಕಗಳ ವಿವರ ಸಂಗ್ರಹಿಸಿ, ರಾಷ್ಟ್ರೀಯ ಬಸವ ದಳದ ಕೇಂದ್ರ ಸಂಸ್ಥೆಗೆ ಕಳುಹಿಸಬೇಕು.

4. ಆ ಗ್ರಾಮ, ಊರುಗಳ ವ್ಯಾಪ್ತಿ ಬರುವ ತಾಲ್ಲೂಕು, ಜಿಲ್ಲೆಯ ಅಧಿಕಾರಿಗಳನ್ನು ಸಂಪರ್ಕಿಸಿ ಬಲಿ ತಡೆಯಲು ಕ್ರಮ ಕೈಗೊಳ್ಳಲು ಆಗ್ರಹಿಸುವುದೇ ಅಲ್ಲದೇ ತಾವು ಈ ದಿಶೆಯಲ್ಲಿ ಮಾಡುವ ಕಾರ್ಯಗಳ ವಿವರ ಅವರಿಗೆ ನೀಡಬೇಕು. ಸಮಾಜ ಸಂಘಟನೆಯಷ್ಟೇ ಸಮಾಜದ ಶುದ್ಧೀಕರಣ ಕಾರ್ಯವೂ ಅತ್ಯಗತ್ಯ ಎಂಬುದನ್ನು ಅರಿತು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ತಮ್ಮನ್ನು ತಾವು ಈ ಪವಿತ್ರ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

ಕಲ್ಯಾಣ ಪರ್ವಕ್ಕಾಗಿ ದೇಣಿಗೆ ಸಂಗ್ರಹ

- ಮಾತಾಜಿ

ಶರಣ ಬಂಧುಗಳೇ,

ಬಸವ ಕಲ್ಯಾಣದ ಪುನರುತ್ಥಾನದ ಉದ್ದೇಶದಿಂದ ಬಸವ ಮಹಾಮನೆ ನಿರ್ಮಾಣ ಮತ್ತು ಕಲ್ಯಾಣ ಪರ್ವದ ಕಾರ್ಯಕ್ರಮ ಸಂಯೋಜಿಸಲಾಗಿದೆ. 1988 ರಲ್ಲಿ ಆರಂಭವಾದ ಶರಣ ಮೇಳ ಈಗಾಗಲೇ ಜನರ ಮನಸ್ಸಿನಲ್ಲಿ ಸ್ಥಾಯಿಯಾಗಿದೆ. ಶರಣ ಮೇಳದ ಮಹತ್ವವನ್ನು ವರ್ಷದಿಂದ ವರ್ಷಕ್ಕೆ ಜನರು ಮನಗಾಣುತ್ತಲಿದ್ದಾರೆ. ಮೊದಲು ಪಕ್ಕದ ತಾಲ್ಲೋಕಿನವರಿಗೆ ಸಹ 'ದೂರ'ವಾಗಿದ್ದ ಕೂಡಲ ಸಂಗಮ ಈಗ ದೂರದ ರಾಜ್ಯಗಳಿಂದೆಲ್ಲ ಸಂದರ್ಶಕರನ್ನು ಆಕರ್ಷಿಸುತ್ತಿದೆ. ಮಾನಸಿಕವಾಗಿ ಹತ್ತಿರವಾದಾಗ ಭೌಗೋಳಿಕ ದೂರ ಗಮನಕ್ಕೆ ಬಾರದು. ಬಸವ ಕಲ್ಯಾಣ ಮತ್ತು ಕಲ್ಯಾಣ ಪರ್ವದ ಮಹತ್ವವನ್ನು ಜನರಿಗೆ ತಿಳಿಸಿಕೊಡಬೇಕಾದರೆ ವ್ಯವಸ್ಥಿತವಾಗಿ ನಾವು ಪ್ರಚಾರ ಮಾಡಬೇಕಾಗುತ್ತದೆ.

17ನೆಯ ಶರಣ ಮೇಳಕ್ಕೆ ಹರಿದು ಬಂದ ಜನ ಸಾಗರವನ್ನು ನೋಡಿದರೆ ವಿಸ್ಮಯವೆನಿಸುತ್ತದೆ. ಕಲ್ಯಾಣ ಪರ್ವಕ್ಕೂ ಇನ್ನು ವರ್ಷದಿಂದ ವರ್ಷಕ್ಕೆ ಜನ ಸಮೂಹ ಜಾಸ್ತಿಯಾಗುತ್ತದೆ. ಆದ್ದರಿಂದ ಶರಣ ಮೇಳಕ್ಕೆ ದೇಣಿಗೆ ಕೇಳಿರುತ್ತೇವೆ ಮತ್ತೆ ಹೇಗೆ 4 ತಿಂಗಳ ಅವಧಿಯಲ್ಲಿ ಕಲ್ಯಾಣ ಪರ್ವಕ್ಕೆ ಕೇಳುವುದು ಎಂಬ ಸಂಕೋಚ ಶರಣ ಬಂಧುಗಳನ್ನು ಕಾಡುವುದು ಸಹಜ, ಆದರೆ, ಏನು ಮಾಡುವುದು? ಕಲ್ಯಾಣ ಪರ್ವದ ನಿರ್ವಹಣೆ, ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಅಷ್ಟೇ ಅಗತ್ಯ ಕಾರ್ಯಕ್ರಮಗಳು. ಆದ್ದರಿಂದ ಹೊಸಬರು ರಸೀತಿ ಪುಸ್ತಕಗಳನ್ನು ಸ್ವಯಂ ಪ್ರೇರಣೆಯಿಂದ ತರಿಸಿಕೊಂಡು ದೇಣಿಗೆ ಸಂಗ್ರಹಿಸಬೇಕು. ಈ ಮೊದಲು ರಸೀತಿ ಪುಸ್ತಕ ಕಳಿಸುತ್ತಿದ್ದವರಿಗೆ ಯಥಾ ಪ್ರಕಾರ ಕಳಿಸಿಕೊಡಲಾಗುವುದು.

ಬಸವ ಜಯಂತಿಯು ಈ ಬಾರಿ ಮೊದಲೇ (ದಿ. 23-4-2004) ಮುಗಿದಿರುವುದರಿಂದ ಸ್ಥಳೀಯವಾಗಿ ಮೆರವಣಿಗೆ ಉತ್ಸವ ಮತ್ತು ಜಯಂತಿ ಕಾರ್ಯಕ್ರಮ ಮುಗಿಸಿ ಬರುವವರಿಗೂ ಅನುಕೂಲವಾಗುತ್ತದೆ. ಹೆಚ್ಚಿನ ಸಹಕಾರ ನೀಡುವಿರಾಗಿ ನಂಬುತ್ತೇವೆ.

ತ್ರಿವಿಧ ದಾಸೋಹದಲ್ಲಿ ಸವೆಯದ ಉತ್ಸಾಹ

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನವಲಸದಂತೆ ಮಾಡಯ್ಯಾ,
ತನು ದಾಸೋಹಕ್ಕೆ ಉಬ್ಬುವಂತೆ ಮಾಡು;
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ,
ಪರಿಣಾಮಿಸುವಂತೆ ಮಾಡು, ಲಿಂಗದೇವಾ. - ಬ.ವ.ದೀ. 456

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ಕಾಯಕ - ದಿನದ ಅಂಗವಾಗಿ ಮೂರನೆಯ

ಕಲ್ಯಾಣ ಪರ್ವ

2004 ರ ಮೇ 1, 2 ಮತ್ತು 3 ರಂದು



ವಚನ ಸಾಹಿತ್ಯ

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಸಲಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988 ರಿಂದ ಪ್ರತಿವರ್ಷವೂ ಜನವರಿ 11 ರಿಂದ 15 ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 17ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ, ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ" ವನ್ನು ನಡೆಸಲಾಗುತ್ತಿದೆ. ಮೂರನೆಯ ಕಲ್ಯಾಣ

ಪರ್ವವನ್ನು 2004ನೆಯ ಇಸವಿಯ ಮೇ 1,2 ಮತ್ತು 3 ರಂದು ಬಸವ ಮಹಾಮನೆಯ ಆವರಣದಲ್ಲಿ ಸಂಯೋಜಿಸಲಾಗಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮಾತ್ರವಲ್ಲ; ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare State) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು." ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 30ರ ರಾತ್ರಿಯಿಂದ ಮೇ 4ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ	4. ಹಿತೈಷಿಗಳು	: 500 ರೂ
2 ಪೋಷಕರು	: 2000 ರೂ. ಮತ್ತು ಮೇಲೆ	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
3. ದಾನಿಗಳು	: 1000 ರೂ. ಮತ್ತು ಮೇಲೆ	6. ಪ್ರತಿನಿಧಿ ಶುಲ್ಕ	: 100 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಮತ್ತು ದವಸ, ಧಾನ್ಯಗಳನ್ನು ತಮ್ಮ ಶಕ್ತ್ಯಾನುಸಾರ ಕೊಡಬಹುದು

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು(F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸಿ ಕೊಡುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿಮೂರುವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ

Digitalized by e-Sahithya Documentation Forum
Sponsored by Sarayu Foundation Trust

ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ. 2. ನಿತ್ಯ ಪೂಜಾ ನಿಧಿ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಅಂಚೆಯಲ್ಲಿ ಕಳಿಸಲಾಗುವುದು. 600 ರೂ. **3. ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು ಮತ್ತು ಪ್ರಸಾದವನ್ನು ದಾನಿಗಳಿಗೆ ಅಂಚೆಯಲ್ಲಿ ಕಳಿಸುವುದು. 1200 ರೂ. **4. ಬಸವಾಲಯ ನಿರ್ಮಾಣ :** ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು. **5. ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ "ಬಸವ ಮಂಟಪ" ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು. **6. ಬಸವೇಶ್ವರ ಸಮುದಾಯ ಭವನ :** ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು. **7. ಶರಣ ಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು. **8. 63 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ :** ಅಂದಾಜು ವೆಚ್ಚ 1 ಕೋಟಿ ರೂಪಾಯಿಗಳು ರೂ. 11,000 ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. **9.ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.**

ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್ ಕಟ್ಟಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗಿದೆ. ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ :
ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-251921/252856

ಸಾಲದ ಮೂಲಕ ನೆರವು ನೀಡಲು ಕೋರಿಕೆ

- ಮಾತಾಜಿ

ಶರಣ ಬಂಧುಗಳೇ,

ಹದಿನೇಳನೆಯ ಶರಣ ಮೇಳದ ಸಭೆಯಲ್ಲಿ ಸಾರ್ವಜನಿಕವಾಗಿ ಈ ಬಗ್ಗೆ ವಿವರಿಸಿ, ವಿನಂತಿಸಲಾಗಿದೆ. ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಮಹಾಮನೆಯ ನಿರ್ಮಾಣಕ್ಕೆಂದು ಜಾಗ ಖರೀದಿಸಲು ಅತ್ಯಂತ ಅವಸರದಿಂದ ಹಣವನ್ನು ಹೊಂದಿಸಿ ಬೇಕಾದಾಗ ಶರಣ ಬಂಧುಗಳಿಂದ ಬಡ್ಡಿ ರಹಿತವಾಗಿ, ಮತ್ತೆ ಕೆಲವರಿಂದ ಬಡ್ಡಿ ಸಹಿತವಾಗಿ ಸಾಲವನ್ನು ಪಡೆಯಲಾಯಿತು. ಹೆಚ್ಚಿನ ಪ್ರಮಾಣದ ಬಡ್ಡಿದರ ಇದ್ದ ಸಾಲವನ್ನು ಶರಣ ಬಂಧುಗಳ ನೆರವಿನಿಂದ ತೀರಿಸಲಾಗುತ್ತಿದೆ. ಇನ್ನು ಕೆಲವು ಶರಣರು ಬಡ್ಡಿ ರಹಿತವಾಗಿ ಸಾಲವನ್ನು ಕೊಟ್ಟಿದ್ದರೂ ತಮ್ಮ ಮನೆಯ ಕಾರ್ಯಗಳಿಗಾಗಿ ಇಟ್ಟುಕೊಂಡಿದ್ದ ಆ ಹಣವನ್ನು ತಮಗೆ ಅಗತ್ಯವಿದ್ದ ಕಾರ್ಯಕ್ಕೆ ಬೇಕು ಎಂದಾಗ ವಾಪಸ್ಸು ಕೊಡಬೇಕು ಎಂಬ ಕರಾರು ಹಾಕಿದ್ದರು. ಮನೆ ಕಟ್ಟಿಸಲು, ಜಾಗ ಖರೀದಿಸಲು, ಮಕ್ಕಳ ಮದುವೆ ಮಾಡಲು ಕಾಯ್ದಿರಿಸಿಕೊಂಡಿದ್ದ ಹಣವನ್ನು ಕೊಟ್ಟಿದ್ದು, ತಮಗೆ ಬೇಕು ಎನಿಸಿದಾಗ ಕೇಳಿ ಪಡೆಯುತ್ತಿದ್ದಾರೆ. ಪ್ರವಚನದ ಮೂಲಕ ಬರುವ ಕಾಣಿಕೆ, ಭಕ್ತರು ಕೊಡುವ ದೇಣಿಗೆ ಮೂಲಕ ಸಾಲವನ್ನು ತೀರಿಸುತ್ತಾ, ಕೆಲವು ಹಣಕ್ಕೆ ಬಡ್ಡಿ ಕಟ್ಟುತ್ತ ಬರುತ್ತಿದ್ದೇವೆ. ಕೆಲವರು ತಾವು ಸಾಲವಾಗಿ ಕೊಟ್ಟ ಹಣವನ್ನು ಕಾಣಿಕೆಯನ್ನಾಗಿ ಪರಿವರ್ತಿಸಿದ್ದಾರೆ. ಸಾಲವಿದೆ ಎಂದು ಕಾಮಗಾರಿಯನ್ನು ನಿಲ್ಲಿಸಬಾರದೆಂದು ಬಸವ ಕಲ್ಯಾಣ ಮತ್ತು ಕೂಡಲಸಂಗಮದಲ್ಲಿ ಕಟ್ಟಡ ನಿರ್ಮಾಣ ಕೆಲಸವನ್ನು ಮುಂದುವರಿಸಿಯೂ ಇದ್ದೇವೆ.

2001ರಲ್ಲಿ ಮೊದಲು ಖರೀದಿಸಿರುವ ಜಮೀನಿಗೆ ಹೊಂದಿಕೊಂಡಂತಿರುವ 4 ಎಕರೆ ಮತ್ತು 13 1/2 ಎಕರೆ ಜಮೀನನ್ನು ಖರೀದಿಸಲಾಗಿದೆ. ಅದಕ್ಕಾಗಿಯೂ ಪುನಃ ಜನರಿಂದ ಸಾಲಪಡೆಯಲಾಯಿತು. ಕಲ್ಯಾಣ ಪರ್ವ, 63 ಅಡಿ ಎತ್ತರದ ಬಸವಣ್ಣನವರ ಮೂರ್ತಿ, ಶರಣ ಸ್ಮಾರಕ ಇತ್ಯಾದಿ ಮಾಡಲು ನಮಗೆ 3 ಎಕರೆ ಜಾಗ ಯಾತಕ್ಕೂ ಸಾಕಾಗದೆಂದು ಪುನಃ 2002 ಮತ್ತು 2003 ರಲ್ಲಿ ಖರೀದಿಸುವುದು ಅನಿವಾರ್ಯವಾಯಿತು. ಹಣ ಜಮಾ ಆದ ಮೇಲೆ ಜಮೀನು ಖರೀದಿಸುವಷ್ಟು ವ್ಯವಧಾನವಿರಲಿಲ್ಲ. ಇದು ನಮ್ಮ ಒಡನಾಟದಲ್ಲಿರುವ ಎಲ್ಲ ಆತ್ಮೀಯ ಶರಣ ಬಂಧುಗಳಿಗೂ ಗೊತ್ತು ಮತ್ತು ಎಲ್ಲ ಹಂತದಲ್ಲಿಯೂ ಹಲವರೊಡನೆ ಸಮಾಲೋಚಿಸಿಯೇ ಕಾರ್ಯ ಮಾಡುತ್ತಲಿದ್ದೇವೆ.

2001 ಮತ್ತು 2002 ರಲ್ಲಿ ಸಾಲಕೊಟ್ಟ ಶರಣ ಬಂಧುಗಳು ಈಗ ತಮ್ಮ ಕೆಲಸ ಕಾರ್ಯಗಳಿಗಾಗಿ ವಾಪಸ್ಸು ಕೇಳುತ್ತಲಿದ್ದಾರೆ ಮತ್ತು ಬಡ್ಡಿ ದರವು ಬಹಳಷ್ಟು ಇರುವ ಸಾಲಕ್ಕೆ ಕಟ್ಟುವ ಅನಿವಾರ್ಯತೆ ಸಹ ಇದೆ. ಆದ್ದರಿಂದ ಅನುಕೂಲತೆ ಇರುವ ಶರಣ ಬಂಧುಗಳು ಹೊಸದಾಗಿ ಸಾಲವನ್ನು ಕೊಟ್ಟರೆ ಹಿಂದಿನ ಕೆಲವರದ್ದು ತೀರಿಸಲು ಅನುಕೂಲವಾಗುತ್ತದೆ. ಶರಣ ಮೇಳದಲ್ಲಿ ಹೀಗೆ ಮನವಿ ಮಾಡಿಕೊಂಡಾಗ ಓರ್ವ ಶರಣರು ಒಂದು ಲಕ್ಷ ರೂಪಾಯಿಯ ಸಾಲವನ್ನು ಕೊಟ್ಟಿರುತ್ತಾರೆ. ಬ್ಯಾಂಕುಗಳಲ್ಲಿ ಬಡ್ಡಿಯ ದರ ತೀರಾ ಕಮ್ಮಿ ಇರುವುದರಿಂದ ಅದಕ್ಕಿಂತಲೂ ಹೆಚ್ಚು ಬಡ್ಡಿ ಸಹ ನಾವು ಕೊಡಬಹುದು ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇವೆ. ಕಾಣಿಕೆ ನೀಡುವವರಿಗಂತೂ ಸದಾ ಅವಕಾಶವಿರುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

JOB ORIENTED INSTITUTE

ನೀವೇಕೆ "ಕಾಯಕ ಕಂಪ್ಯೂಟರ್ ಎಜ್ಯುಕೇಶನ್(KCE)" ನಲ್ಲಿಯೇ ಕಂಪ್ಯೂಟರ್ ಕಲಿಯಬೇಕು?

ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮ ಜ್ಞಾನಾರ್ಜನೆ, ಆದರ್ಶ ವ್ಯಕ್ತಿತ್ವ ನಿರ್ಮಾಣದ ಜೊತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವುದು. ಈ ಸ್ಪರ್ಧಾತ್ಮಕ ಕಂಪ್ಯೂಟರ್ ಯುಗದಲ್ಲಿ ನಮ್ಮ ನಿರೀಕ್ಷೆಗೂ ಮೀರಿದ ಉದ್ಯೋಗಾವಕಾಶಗಳು ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್‌ಗಳಲ್ಲಿವೆ. ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಅಗತ್ಯವಾದ ಜ್ಞಾನ ಮತ್ತು ಕ್ಷೇತ್ರದ ಅರಿವು ಮಾತ್ರ ಸಮರ್ಪಕವಾಗಿ ದೊರಕುತ್ತಿಲ್ಲ.

ಈ ಅಂಶಗಳನ್ನು ಪರಿಶೀಲಿಸಿ ಕಾಯಕ ಕಂಪ್ಯೂಟರ್ ಎಜ್ಯುಕೇಶನ್‌ನಲ್ಲಿ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಕ್ಷೇತ್ರಕ್ಕೆ ಪೂರಕವಾಗುವಂತಹ ಬೋಧನೆ ನೀಡಲಾಗುವುದು.

Hardware & Networking
Diploma In Computer Hardware
A+ Certification Course
Diploma in Networking
MCSE 2000
Diploma in Linux Administration

Free Personality Development

Office Management Courses
Computerised Office Management Course
Diploma in Desk Top Publishing (D.T.P)

100% Job Guarantee*
for S.S.L.C / P.U.C or any graduate candidates
*conditions apply

ಕಾಯಕ ಕಂಪ್ಯೂಟರ್ ಎಜ್ಯುಕೇಶನ್
KAYAKA COMPUTER EDUCATION
"Basava Krupa", # 10/67, Opp. M.E.I Polytechnic,
4th Block, Rajajinagar, Bangalore-10.

ಬೊಮ್ಮಸಾಗರ ಸಹಸ್ರ- ಸಹಸ್ರ ಪ್ರಾಣಿ ಬಲಿ ತಡೆ ಒಂದು ಐತಿಹಾಸಿಕ ಮೈಲಿಗಲ್ಲು

ಬಸವ ಧರ್ಮಪೀಠದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ತಾಯಿ ಹಾಗೂ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳ ಸಂಪೂರ್ಣ ಸಹಕಾರ, ಗದಗ್ ಜಿಲ್ಲಾಡಳಿತದ ದೃಢಸಂಕಲ್ಪ, ಸುದ್ದಿ-ಮಾಧ್ಯಮಗಳು ನೀಡಿದ ವ್ಯಾಪಕ ಪ್ರಚಾರ, ಜೈನ ಧರ್ಮೀಯರ ಆರ್ಥಿಕ ಸಹಯೋಗ, ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ, ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘ, ಹುಬ್ಬಳ್ಳಿ ಪಂಜರಾ ಪೋಳ್ ಸಂಸ್ಥೆಗಳ ಸತತ ಪ್ರಯತ್ನ ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದ ರಾಷ್ಟ್ರೀಯ ಬಸವ ದಳ, ಗದಗ ಜಿಲ್ಲಾ ಪೋಲೀಸ್ ಪಡೆ ಮತ್ತು ರೋಣ ತಾಲ್ಲೋಕಿನ ತಹಸೀಲ್ದಾರ್ ಮತ್ತು ಡಿ.ಸಿ., ನೇತೃತ್ವದ ಪೋಲೀಸ್ ಪಡೆಗಳ ಕ್ಷಿಪ್ರ ಜಂಟಿ ಕಾರ್ಯಾಚರಣೆಯಿಂದಾಗಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದ್ದ 'ಬೊಮ್ಮಸಾಗರ ಸಹಸ್ರ ಪ್ರಾಣಿ ಬಲಿ' ಪದ್ಧತಿಗೆ ಈ ವರ್ಷ ಮುಕ್ತಿ ಸಿಕ್ಕಿತು.

ಗದಗ ಜಿಲ್ಲೆಯ ರೋಣ ತಾಲ್ಲೋಕಿನ ಬೊಮ್ಮಸಾಗರದ ದುರ್ಗಾದೇವಿ ಮತ್ತು ಕರಿಯಮ್ಮ ದೇಗುಲಗಳಿರುವ ಗುಡ್ಡದ ಮೇಲಿನಿಂದ ಗ್ರಾಮದ ಮಧ್ಯ ಭಾಗದವರೆಗೆ ರಕ್ತ ಹರಿಸಲಿಕ್ಕಾಗಿಯೇ ನಿರ್ಮಿಸಿದ್ದ ಕಾಲುವೆಯಲ್ಲಿ ಈ ಬಾರಿ ರಕ್ತದ ಹೊಳೆ ಹರಿಯಲಿಲ್ಲ. ಮೂಕ, ಮುಗ್ಧ ಪ್ರಾಣಿಗಳ ರುಂಡ ಮುಂಡಗಳು ವಿಲಿ ವಿಲಿ ಒದ್ದಾಡಲಿಲ್ಲ. ದೇವಿಯರ ನಾಲಿಗೆ, ಕೈಗಳು ರಕ್ತಸಿಕ್ತವಾಗಲಿಲ್ಲ. ದೇವಾಲಯ ಪ್ರಾಂಗಣ ಸುತ್ತಣ ಪರಿಸರ ಮತ್ತು ಹಲವಾರು ಕಿಲೋಮೀಟರ್ ವ್ಯಾಪ್ತಿಯೊಳಗೆ ಒಂದೇ ಒಂದು ಪ್ರಾಣಿಯ ಬಲಿಯಾಗಲಿ, ಒಂದು ಹನಿ ರಕ್ತದ ತರ್ಪಣವಾಗಲೀ ಜರುಗಲಿಲ್ಲ. ಬದಲಿಗೆ ದೇವಿಯರಿಗೆ ಹಣ್ಣು-ಹಂಪಲುಗಳ ನೈವೇದ್ಯವಾಯಿತು. ಅಗರಬತ್ತಿ ಮುಂತಾದ ಸುಗಂಧ ದ್ರವ್ಯಗಳು ಅಲ್ಲೆಲ್ಲಾ ಸುವಾಸನೆಯನ್ನು ಪ್ರಸರಿಸಿದವು. ರಕ್ತದ ಕಾಲುವೆಯಲ್ಲಿ ಪಂಚಾಮೃತ ಹರಿಯಿತು. ರಕ್ತದ ಕಾಲುವೆಯಲ್ಲೇ ಮುಳುಗಿ ತೇಲಾಡುತ್ತಿದ್ದ ಭಕ್ತಸ್ತೋಮ ಈ ಬಾರಿ ತಣ್ಣೀರಿನಲ್ಲಿ ಮಿಂದು, ಮಡಿಯುಟ್ಟು, ಪತ್ರೆ-ಪುಷ್ಪಗಳೊಂದಿಗೆ ಭಕ್ತಿಯಿಂದ ನಮಸ್ಕಾರಗಳನ್ನು ಮಾಡುತ್ತಿದ್ದರು. ನೂರಾರು ವರ್ಷಗಳಿಂದ ಅಜ್ಞಾನದ ಕಗ್ಗತ್ತಲಲ್ಲಿ, ರಕ್ತದ ಮಡುವಿನಲ್ಲಿ ಮುಳುಗಿರುತ್ತಿದ್ದ ಬೊಮ್ಮಸಾಗರದಲ್ಲಿ ವಿಸ್ಮಯ, ವಿನೂತನ, ಅಹಿಂಸಾತ್ಮಕವಾದ ದಿವ್ಯಲೋಕವೊಂದರ ಸೃಷ್ಟಿಯಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರತಿ ವರ್ಷ ಐದಾರು ಸಾವಿರ ಕೋಣ, ಮೂವತ್ತು ಸಾವಿರಕ್ಕೂ ಹೆಚ್ಚು ಕುರಿ-ಮೇಕೆ, ಕೋಳಿ ಮುಂತಾದ ಮುಗ್ಧ-ಮೂಕ-ನಿರುಪದ್ರವಿ ಹಾಗೂ ಮಾನವ ಸಹಕಾರಿ ಪ್ರಾಣಿಗಳನ್ನು ನೂರಾರು ವರ್ಷಗಳಿಂದ ನಿರಾತಂಕವಾಗಿ, ನಿರ್ದಯತೆಯಿಂದ, ಲಕ್ಷಾಂತರ ಜನರು ಒಂದೆಡೆ ಸೇರಿ ಕೇಕೆ ಹಾಕುತ್ತಾ ದೇವಾಲಯದ ಬಲಿ ಪೀಠದಲ್ಲಿ ದೇವಿಗೆ ಕೊಡಲ್ಪಡುತ್ತಿದ್ದ ಸಹಸ್ರಾರು ಪ್ರಾಣಿಗಳ ಸಾಮೂಹಿಕವಾದ ಭೀಭತ್ಸ ಹತ್ಯೆಯನ್ನು ಈ ವರ್ಷ, ಅದು ಕೆಲವೇ ದಿನಗಳ ಅವಧಿಯಲ್ಲಿ ತಡೆದಿರುವುದು ಅತ್ಯಂತ ರೋಚಕ ಹಾಗೂ ಸಾಹಸಕಾರಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದ

Digitalized by e-Sahithya Documentation Forum
Sponsored by Sarayu Foundation Trust

ಘಟನೆಯಾಗಿದೆ. ಜೊತೆಗೆ ಇಡೀ ದೇಶದಲ್ಲಿ ಪ್ರಾಣಿ ಬಲಿ ಎಲ್ಲೇ ಆದರೂ, ಅದು ಎಂತಹ ಭಯಾನಕವಾದುದೇ ಆಗಿದ್ದರೂ ಅದನ್ನು ಸರ್ಕಾರ ಹಾಗೂ ಸ್ವಯಂ ಸೇವಾ ಸಂಘಟನೆಗಳು ಹಾಗೂ ಧರ್ಮಗುರುಗಳ ನೆರವಿನಿಂದ ತಡೆಯಲು ಸಾಧ್ಯ ಎಂಬುದನ್ನು ಈ ಪ್ರಸಂಗ ಸ್ಪಷ್ಟಪಡಿಸುತ್ತದೆ.

ಈ ನಿಟ್ಟಿನಲ್ಲಿ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು ನಿರ್ವಹಿಸಿದ ಕಾರ್ಯ ಪ್ರಶಂಸನೀಯ. ಗದುಗಿನ ತೋಂಟದಾರ್ಯ ಮಠದ ವಿದ್ಯಾರ್ಥಿಗಳು, ರಾಷ್ಟ್ರೀಯ ಬಸವ ದಳದ ಸುಮಾರು 300 ಜನ ಶರಣ-ಶರಣೆಯರು ಹಾಗೂ ಜಗದ್ಗುರು ಮಾತೆ ಗಂಗಾದೇವಿಯವರು 3ನೇ ತಾರೀಖು ಸಂಜೆ 6-00 ಗಂಟೆಯಿಂದ ಇಡೀ ರಾತ್ರಿ ಪ್ರತಿಯೊಂದು ಪೋಲೀಸ್ ಚೆಕ್ ಪೋಸ್ಟ್‌ಗಳಿಗೂ ಭೇಟಿನೀಡಿ, ಅಲ್ಲಿ ಕಾವಲು ಕಾಯುತ್ತಿದ್ದ ಪೋಲೀಸರನ್ನು ಸಂಬೋಧಿಸಿ, ಅವರಿಗೆ ಧೈರ್ಯ, ಉತ್ಸಾಹಗಳನ್ನು ತುಂಬಿ ಯಾವುದೇ ಒಂದು ಪ್ರಾಣಿಯ ಬಲಿಗೂ ಅವಕಾಶ ಕೊಡಬಾರದೆಂದೂ, ಪ್ರಾಣಿ ಪ್ರವೇಶ ನಿಷೇದಾಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹುರಿದುಂಬಿಸುತ್ತಿದ್ದ ಪರಿ, ಅವರು ರಾತ್ರಿಯ ವೇಳೆಯಲ್ಲಿ ಅಪರಿಚಿತ ಸ್ಥಳದಲ್ಲಿ ಸಂಚರಿಸುತ್ತಿದ್ದ ರೀತಿ ಆ ಯುದ್ಧ ಭೂಮಿಯಲ್ಲಿ ವೀರ ಮಾತೆ ಅಕ್ಕನಾಗಲಾಂಬಿಕೆ, ಕಿತ್ತೂರು ರಾಣಿ ಚೆನ್ನಮ್ಮ, ಕೆಳದಿ ಚೆನ್ನಮ್ಮಾಜಿ ಮುಂತಾದ ಸಮರಾಂಗಣದಲ್ಲಿ ಸೈನಿಕರನ್ನು ತಮ್ಮ ಶತ್ರುಗಳ ವಿರುದ್ಧ ಸಮರೋತ್ಸಾಹಕ್ಕೆ ಹುರಿದುಂಬಿಸುತ್ತಿದ್ದ ದೃಶ್ಯ ನೆನಪಿಗೆ ತರುತಿತ್ತು. ಏಕೆಂದರೆ ಅನೇಕ ಮಠಾಧೀಶರನ್ನು ಈ ಆಂದೋಲನಕ್ಕೆ ಆಹ್ವಾನಿಸಿದ್ದರೂ, ಹತ್ತು ಹಲವು ಕಾರಣಗಳನ್ನು ನೀಡಿ, ಮತ್ತೂ ಕೆಲವರು ಭಯಗ್ರಸ್ತರಾಗಿ ತಪ್ಪಿಸಿಕೊಂಡರೆ, ಓರ್ವ ಮಹಿಳೆಯಾಗಿ ಗಂಗಾ ಮಾತಾಜಿಯವರು 'ಪ್ರಾಣದಲ್ಲಿ ನಿರ್ಭಯ'ರಾಗಿ, ಯೋಗಿಣಿಯಾದ ಅವರು ಯೋಧಳಂತೆ ಪ್ರಾಣಿ ಬಲಿ ನೀಡುವುದನ್ನು ತಡೆಯಲು ಕಾರ್ಯನಿರ್ವಹಿಸಿದ ರೀತಿ ಅತ್ಯಂತ ಪ್ರಶಂಸಾರ್ಹ. ಈ ಹೋರಾಟದಲ್ಲಿ ಅವರ ಜೊತೆಯಲ್ಲಿದ್ದ ನಾನು, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಪ್ರಾಣಿ ದಯಾ ಸಂಘದ ಉತ್ತಮ ಚಂದ್ ದುಗಡ್, ಹುಬ್ಬಳ್ಳಿ ಪಾಂಜರಾ ಪೋಳ್‌ನ ಮೇಘರಾಜ್ ಕವಾಡ, ಓಂಕಾರಪ್ಪ ಶಿವಳ್ಳಿ, ಗದಗಿನ ತೋಂಟದಾರ್ಯ ಮಠದ ಜಕ್ಕನ ಗೌಡ್ರು ಮತ್ತು ವಿದ್ಯಾರ್ಥಿಗಳು, ಲಿಂಗರಾಜ ಇಂಗಳ್ಳಿ, ಶಿವಣ್ಣ ಶಿರೂರ್, ಬಸವಯ್ಯ ಗಣಾಚಾರಿ, ಕೊಪ್ಪಳ, ಧಾರವಾಡ, ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದವರು ಹಾಗೂ ಕಾರ್ಯಕರ್ತರಿಗೆ ವಸತಿ ಹಾಗೂ ಪ್ರಸಾದ ವ್ಯವಸ್ಥೆಗೆ ಅನುಕೂಲತೆ ಮಾಡಿಕೊಟ್ಟಿದ್ದ ಗುಲಗಂಜಿ ಮಠದ ಶ್ರೀಗಳಿಗೂ ಅಭಿನಂದಿಸುತ್ತೇವೆ.

ಈ ಆಂದೋಲನಕ್ಕೆ ಸಂಪೂರ್ಣ ಸಹಕಾರ ನೀಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಗೂ ಹಾಗೂ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳನ್ನು ಅಭಿನಂದಿಸುತ್ತೇನೆ. 1959ರ ಕರ್ನಾಟಕ ಪ್ರಾಣಿಗಳ ಬಲಿ ಪ್ರತಿಬಂಧಕ ಅಧಿನಿಯಮವನ್ನು ಬಳಸಿ, ಪ್ರತಿಯೊಬ್ಬರು ಧೃತಿಗೆಡದೆ ಇಂತಹ ಪ್ರಾಣಿಬಲಿ ತಡೆಯಲು ಮುಂದಾಗಬೇಕೆಂದು ಈ ಮೂಲಕ ಕೋರುತ್ತೇನೆ.

- ದಯಾನಂದ ಸ್ವಾಮೀಜಿ
ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ಮತ್ತು
ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘ.

ದಿ. 26-1-2004 ರಂದು ಗಡಿಗ್ಲಾಂಜ್‌ನ ಶರಣ. ಕೃಷ್ಣಪ್ಪ ಭರಮಪ್ಪ ಮುಸಳೆಯವರ ನೂತನ ಗೃಹ ಪ್ರವೇಶದ ಸಂದರ್ಭದಲ್ಲಿ ಬಸವ ಧ್ವಜಾರೋಹಣ ಮಾಡುತ್ತಿರುವ ಪೂಜ್ಯರುಗಳು.

ದಿ. 6-2-2004 ಬೀದರ್‌ನಲ್ಲಿ ಚೆನ್ನ ಹುಣ್ಣಿಮೆ : ಚಿತ್ರದಲ್ಲಿ ಜಿಲ್ಲಾ ನ್ಯಾಯಾಧೀಶ ಜಿ. ನರಹರಿ, ಪೂಜ್ಯರುಗಳಾದ ಸಿದ್ದೇಶ್ವರಾನಂದರು, ಚನ್ನಬಸವಾನಂದರು, ಮಾತೆ ನಿಶ್ಚಲಾಂಬಾ, ಚನ್ನಯ ಸ್ವಾಮಿ ಹಾಗೂ ಶರಣೆ. ಚಂದ್ರಮ್ಮ ತಾಯಿಯವರನ್ನು ಕಾಣಬಹುದು.

Digitalized by e-Sahithya Documentation Forum
Sponsored by Sarayu Foundation Trust

ಗಮನಿಸಿ !!!



ಕಂಪ್ಯೂಟರ್ ಬಳಕೆಯಿಂದ ಮತ್ತು ದೂರದರ್ಶನ ವೀಕ್ಷಣೆಯಿಂದ
ಕಣ್ಣು ಉರಿ, ತಲೆನೋವು, ದಣಿವು, ಆಯಾಸ,
ಉಂಟಾಗುತ್ತಿದೆಯೇ?

ಖಂಡಿತವಾಗಿಯೂ ಹೌದೆನ್ನುವಿರಿ, ಅಲ್ಲವೇ? ಏಕೆಂದರೆ ಕಂಪ್ಯೂಟರ್ ಮಾನಿಟರ್ ಅಥವಾ ಟಿ.ವಿ.ಯಿಂದ ನಿರಂತರವಾಗಿ ಹೊರಹೊಮ್ಮುವ ವಿಷಯುಕ್ತ ಕಿರಣಗಳು ನಮ್ಮ ದೇಹದ ಮೇಲೆ ಅನೇಕ ದುಷ್ಪರಿಣಾಮಗಳನ್ನುಂಟುಮಾಡುತ್ತಿರುತ್ತವೆ. ಈ ಮೇಲಿನ ಸಮಸ್ಯೆಗಳಿಗೆ ಪ್ರಪಂಚದಾದ್ಯಂತ ಅನೇಕ ಸಂಶೋಧನೆಗಳು ನಡೆದಿವೆ.

ಇದಕ್ಕೆ ಪರಿಹಾರವೆಂಬಂತೆ
'RAYTECH ANTI-RADIATION SCREEN'
ಎಂಬ ಸಾಧನವನ್ನು ಜನತೆಗೆ ಹೊರತಂದಿದ್ದಾರೆ.

ಹೆಚ್ಚಿನ ವಿವರಗಳಿಗೆ
ನೀಲಕಂಠ ಎಸ್. ಎನ್.
ಗೀತಾ ಎಲೆಕ್ಟ್ರೋ ಎಕ್ವಿಪ್‌ಮೆಂಟ್ಸ್ ಕಂ.,
GEETHA ELECTRO EQUIPEMENTS CO.,
"ಬಸವಕೃಪ", "BASAVAKRUPA", 10/67, 4th Block, Rajajinagar,
Opp: M.E.I. Polytechnic, Bangalore - 10.
Mobile: 98451-63176 Ph: 3302352/335930, 56973949

ಧ್ವಜ ಗೀತೆಯನ್ನು ತನ್ಮಯವಾಗಿ ಶಿಸ್ತಿನಿಂದ ಹಾಡುತ್ತಿರುವ ಶರಣೆಯರು.

17ನೇ ಶರಣಮೇಳದಲ್ಲಿ ಧ್ವಜಗೀತೆ ಹಾಡುತ್ತಿರುವ ಅಪಾರ ಶರಣಸ್ತೋಮ.

Digitalized by e-Sahithya Documentation Forum
Sponsored by Sarayu Foundation Trust

CPMG/KA/BGW-50/2003 - 2005
WPP (W) - 17 R.No. 19980/70

Digitalized by e-Sahithya Documentation Forum
Sponsored by Sarayu Foundation Trust